ಜನಶಕ್ತಿ

ಪ್ರಗತಿಶೀಲ ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 38

೨೦ ಜುಲೈ ೧೯೫೮

★

ಪುಟ ೧೦ ಬೆಲೆ: ೧೩ ನಯೇ ಪೈಸೆ

ಇರಾಕಿನಲ್ಲಿ ಅರಸೊತ್ತಿಗೆಯ ಅಂತಿಮಯಾತ್ರೆ

ಪ್ರಜಾರಾಜ್ಯದ ಸ್ಥಾಪನೆ

ಸಾಮ್ರಾಜ್ಯಶಾಹಿಗಳಿಗೆ ಬಲವಾದ ಏಟು

ಜುಲೈ 14ರಂದು ಇರಾಕ್‌ನಲ್ಲಿ "ಯುವಕ ಸೈನ್ಯಾಧಿಕಾರಿಗಳು" ಅಧಿಕಾರ ವಶಪಡಿಸಿಕೊಂಡರು. ರಾಜಸತ್ತೆಯನ್ನು, ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾದ ಪ್ರಧಾನಿ ನೂರಿಯ ಆಡಳಿತವನ್ನು ಮೂಲೋತ್ಪಾಟನ ಮಾಡಿ ಸ್ವತಂತ್ರ ಪ್ರಜಾರಾಜ್ಯವನ್ನು ಸ್ಥಾಪಿಸಿದರು. ಇದರಿಂದ ಮಧ್ಯಪೂರ್ವ ಪ್ರದೇಶದಲ್ಲಿ ಸಾಮ್ರಾಜ್ಯಶಾಹಿಗಳ ಆಧಾರಸ್ತಂಭವಾಗಿದ್ದ, ಬಾಗ್ದಾದ್ ಮಿಲಿಟರಿ ಒಕ್ಕೂಟದ ಅಂಗವಾಗಿದ್ದು ಅರಬ್ ಸ್ವಾತಂತ್ರ್ಯಕ್ಕೂ ಐಕ್ಯತೆಗೂ ಘಾತಕವಾಗಿದ್ದ ಮೃಗಶಕ್ತಿಯೊಂದು ನಾಶವಾಯಿತು.

"ಪೂರ್ವದಲ್ಲಿ ಬೆಳಗಿನ ಸೂರ್ಯ ಉದಿಸುತ್ತಿದ್ದಾನೆ; ಪಶ್ಚಿಮದಲ್ಲಿ ಸಂಜೆಯ ಸೂರ್ಯ ಮುಳುಗುತ್ತಿದ್ದಾನೆ" ಎಂದು ಮಾವೊ-ತ್ಸೆ-ತುಂಗ್ ಅರ್ಥಗರ್ಭಿತವಾಗಿ ನುಡಿದ ಮಾತು ಮತ್ತೊಮ್ಮೆ ಸತ್ಯವಾಯಿತು. ರಾಷ್ಟ್ರಗಳ ಸ್ವಾತಂತ್ರ್ಯ, ಅಂತರ್‍ರಾಷ್ಟ್ರೀಯ ಸಹಕಾರ ಹಾಗು ವಿಶ್ವಶಾಂತಿಗೆ ಮತ್ತೊಂದು ಮಹಾವಿಜಯ ದೊರಕಿತು.

ಪ್ರತಿಗಾಮಿಗಳ ಕೂಟ ಕುಸಿದು ಬಿತ್ತು

ಇರಾಕ್‌ನಲ್ಲಿ ಈ ಮಹತ್ವದ ಘಟನೆ ನಡೆದ ಸಂದರ್ಭ ಗಮನಾರ್ಹವಾಗಿದೆ. ಬಗ್ದಾದ್ ಮಿಲಿಟರಿ ಒಕ್ಕೂಟಕ್ಕೆ ಸೇರಿದ ಇರಾಕ್, ಇರಾನ್, ತುರ್ಕಿ ಮತ್ತು ಪಾಕಿಸ್ತಾನ ಅಧಿಪತಿಗಳು ಜುಲೈ 14ರಂದು ಒಂದು ಸಮ್ಮೇಳನ ನಡೆಸುವುದರಲ್ಲಿದ್ದರು. ಲೆಬನಾನಿನ ಆಂತರಿಕ ಹೋರಾಟದಲ್ಲಿ ನೇರವಾಗಿ ಪ್ರವೇಶಿಸುವ ವಿಷಯ ಆ ಸಮ್ಮೇಳನದಲ್ಲಿ ನಿರ್ಧಾರವಾಗಬೇಕಿತ್ತು. ಅಲ್ಲದೆ ಕಾಶ್ಮೀರದ ವಿಚಾರದಲ್ಲಿ ಪಾಕಿಸ್ತಾನದ ಪರವಾಗಿ ನಿರ್ಣಯ ಮಾಡುವ ನಾಟಕವೂ ಆಗುವುದಿಲ್ಲಿತ್ತು. ಅಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಇರಾಕ್‌ನ ಘಟನೆ ನಡೆದು ಸಾಮ್ರಾಜ್ಯಶಾಹಿಯ ಕೈಗೊಂಬೆಗಳ ಆಟ ನಡೆಯದಂತಾಯಿತು ಮಾತ್ರವಲ್ಲ ಬಾಗ್ದಾದ್ ಮಿಲಿಟರಿ ಒಕ್ಕೂಟವೇ ಕುಸಿದು ಬೀಳುವಂತಾಯಿತು.

ಈಜಿಪ್ಟ್ ಮತ್ತು ಸಿರಿಯ ಸೇರಿ ಸಂಯುಕ್ತ ಅರಬ್ ಪ್ರಜಾರಾಜ್ಯವನ್ನು ಸ್ಥಾಪಿಸಿದಾಗ, ಅದಕ್ಕೆ ಪ್ರತಿಯಾಗಿ ಇರಾಕ್ ಮತ್ತು ಜೋರ್ಡಾನಿನ ಒಕ್ಕೂಟ ಏರ್ಪಟ್ಟಿತು. ಅದು ಅರಬ್ ಜನತೆಯ ಐಕ್ಯತೆಯನ್ನು ತಡೆಯುವುದಕ್ಕೆ ಹೂಡಲಾಗಿದ್ದ ತಂತ್ರ. ಅದೀಗ ಮುರಿದು ಬಿದ್ದಿದೆ. ಅರಬ್ ಜನತೆಯ ಐಕ್ಯತೆ ದೊಡ್ಡದೊಂದು ಹೆಜ್ಜೆ ಮುಂದಿಟ್ಟಿದೆ. ಇರಾಕ್‌ನ ಹೊಸ ಪ್ರಭುತ್ವವು ಸಂಯುಕ್ತ ಅರಬ್ ಪ್ರಜಾರಾಜ್ಯಕ್ಕೆ ಮನ್ನಣೆ ಕೊಡುವುದಾಗಿ ಘೋಷಿಸಿದೆ.

ಇರಾಕ್‌ನಲ್ಲಿ ಜುಲೈ ೧೪ರಂದು ನಡೆದ ಘಟನೆ ಕೇವಲ ಸೈನಾಧಿಕಾರಿಗಳ ಪಿತೂರಿಯಲ್ಲ, ಬರೀ ಬಂಡಾಯವಲ್ಲ. ಅದು ಜನರ ಸಂಪೂರ್ಣ ಬೆಂಬಲ ಪಡೆದಿರುವ ಕ್ರಾಂತಿಯಾಗಿದೆ. ಸೈನ್ಯಾಧಿಕಾರಿಗಳು ಅಧಿಕಾರ ವಶಪಡಿಸಿಕೊಂಡ ಕೂಡಲೆ ಮಾಡಿರುವ ಘೋಷಣೆಗಳೂ ಅದನ್ನು ಸ್ಪಷ್ಟಪಡಿಸುತ್ತವೆ. ರಾಷ್ಟ್ರದ ಸಾರ್ವಭೌಮತೆಯನ್ನು ಚಲಾಯಿಸಲು ಒಂದು "ಸಾರ್ವಭೌಮ ಮಂಡಲಿ" ಸ್ಥಾಪಿಸಲ್ಪಟ್ಟಿದೆ. ಹೊಸ ರಾಷ್ಟ್ರಾಧ್ಯಕ್ಷರು, ಹೊಸ ಪ್ರಧಾನಿ ಮತ್ತು ಮಂತ್ರಿ ಮಂಡಲ ನೇಮಕವಾಗಿದೆ. ಈ ಹೊಸ ಪ್ರಭುತ್ವಕ್ಕೆ ಜನತೆಯ ಸಂಪೂರ್ಣ ಬೆಂಬಲ ದೊರೆತಿದೆ.

"ನಿಮ್ಮ ಸರಕಾರ"

ನೂತನ ಪ್ರಭುತ್ವವು ಜನತೆಗೆ ಇತ್ತ ಸಂದೇಶದಲ್ಲಿ, "ಇಂದಿನ ಕ್ರಾಂತಿಯ ಮೂಲಕ ಇರಾಕಿ ಜನತೆ ಸಾಮ್ರಾಜ್ಯಶಾಹಿಯ

(ಕೊನೇ ಪುಟ ನೋಡಿ)

ಆಂತರಿಕ ವ್ಯವಹಾರದಲ್ಲಿ ಅಮೇರಿಕದ ಹಸ್ತಕ್ಷೇಪ !

ಲೆಬನಾನಿನಿಂದ ತೊಲಗಬೇಕೆಂದು ರಷ್ಯದ ಎಚ್ಚರಿಕೆ

ಇರಾಕಿನಲ್ಲಿ ನಡೆದ ಘಟನೆಯ ಮರುಕ್ಷಣದಲ್ಲಿ ಜೂಲೈ 15ರ ಮುಂಜಾನೆ ಅಮೇರಿಕೆಯ ಸಮರ ನೌಕೆಗಳು, 5,000ದಷ್ಟು ಸಶಸ್ತ್ರ ಪಡೆಗಳು ಲೆಬನಾನನ್ನು ಸುತ್ತುಗಟ್ಟಿ ಒಳಗೆ ಪ್ರವೇಶಿಸಿದವು ಎಂಬ ಸುದ್ದಿಯನ್ನು ಇಡೀ ಪ್ರಪಂಚ ಕಾತುರತೆಯಿಂದ ಕೇಳಿತು, ತೀವ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿತು.

"ಲೆಬನಾನಿನ ಆಂತರಿಕ ವ್ಯವಹಾರದಲ್ಲಿ ಕೈಹಾಕಿ ಅಮೇರಿಕ ಸೈನಿಕ ಕಾರ್ಯಾಚರಣೆಯನ್ನು ಕೈಕೊಂಡರೆ ಪರಿಸ್ಥಿತಿ ವಿಶ್ವಶಾಂತಿಗೆ ವಿಪತ್ಕಾರಿಯಾಗುವುದು. ಇಂಥ ಪ್ರಸಂಗದಲ್ಲಿ ಸೋವಿಯತ್ ರಷ್ಯವು ಬರೀ ಪ್ರೇಕ್ಷಕನಾಗಿ ಒಂದೆಡೆ ನಿಲ್ಲದು. ಶಾಂತಿ—ಸುಭದ್ರತೆಗಳನ್ನು ರಕ್ಷಿಸಲು ಅಗತ್ಯವಾದ ಕ್ರಮಗಳನ್ನು ಕೈಕೊಳ್ಳುವ ಹಕ್ಕು ತನಗೂ ಇದೆ".

ಎಂದು ಸೋವಿಯತ್ ಸರಕಾರವು ಲೆಬನಾನನ್ನು ಬಳಸಿ ನಿಲ್ಲುತ್ತಿರುವ ಅಮೆರಿಕೆಯ ಸೈನಿಕ ಕ್ರಮಗಳನ್ನು ಕುರಿತು ಎಚ್ಚರಿಕೆ ನೀಡಿದೆ.

ಅಮೇರಿಕೆಯ ಈ ಆಕ್ರಮಣವನ್ನು ತಡೆಗಟ್ಟಬೇಕೆಂದು ಸೋವಿಯತ್ ರಷ್ಯವು ವಿಶ್ವರಾಷ್ಟ್ರ ಸಂಸ್ಥೆಗೆ ಕರೆಯಿತ್ತಿದೆ.

ಇರಾಕ್ ಮತ್ತು ಲೆಬನಾನ್‌ಗಳಲ್ಲಿ ನಡೆದಿರುವ ಜನಹೋರಾಟಗಳು ಇಂದು "ಅಂತರ್ಯುದ್ಧದ" ಮಟ್ಟವನ್ನು ತಲುಪಿವೆ. ಇರಾಕ್ ಮತ್ತು ಲೆಬನಾನಿನ ಪಾಶ್ಚಿಮಾತ್ಯಪರ ನೀತಿಯನ್ನು ಒಪ್ಪದ, ಸ್ವಾತಂತ್ರ್ಯಪ್ರಿಯ ಜನರ ಹೋರಾಟ ಪಾಶ್ಚಿಮಾತ್ಯ ಹಿತಗಳಿಗೆ ಧಕ್ಕೆಯುಂಟು ಮಾಡುವದಾಗಿರುವದರಿಂದ ಅಮೇರಿಕೆಯ ಸೈನಿಕರು ಧಾವಿಸುತ್ತಿರುವಂತೆ ಫ್ರೆಂಚ್ ಮತ್ತು ಬ್ರಿಟಿಷ್ ಸಮರ ನೌಕೆಗಳ ಚಲನವಲನವೂ ಲೆಬನಾನ್ ಸುತ್ತ ಬಿರುಸಿನಿಂದ ಸಾಗಿದೆ.

ಭ್ರಷ್ಟ ಕ್ರಮ

ಅಮೇರಿಕೆಯ ಈ ಹಸ್ತಕ್ಷೇಪದ ಬಗ್ಗೆ ಅಮೇರಿಕೆಯ ರಾಜತಾಂತ್ರಿಕ ವಲಯಗಳಲ್ಲಿ ಎರಡು ಬಗೆಯ ಅಭಿಪ್ರಾಯಗಳನ್ನು ರೂಪುಗೊಂಡಿದ್ದು ಅಮೇರಿಕೆಯ ನೀತಿಯ ಬಗ್ಗೆ ಅಸಹಕಾರ ಭಾವನೆಯನ್ನೇ ತೋರುವವರು ಹೆಚ್ಚಾಗಿದ್ದು "ಇದೊಂದು ಭ್ರಷ್ಟ ಕ್ರಮ" ಎಂದು ಅವರ ಅಭಿಪ್ರಾಯವಾಗಿದೆ. "ಲೆಬನಾನಿನಲ್ಲಿ ಪ್ರವೇಶಿಸುವಂತೆ ಇರಾಕಿನಲ್ಲೂ ಪ್ರವೇಶಿಸಬಾರದೆ? ಆಗ ರಷ್ಯವೂ ಸುಮ್ಮನೆ ಕೂಡಲಿಕ್ಕಿಲ್ಲ. ಅಮೇರಿಕೆಯ ಈ ಕ್ರಮ ಅರಬ್ ರಾಷ್ಟ್ರೀಯ ವಾದದ ಹಾಗೂ ವಾದಿಗಳ ಸಂಘಟನೆಯನ್ನು ಪ್ರಜ್ವಲಿಸುವಂಥದಾಗಿದೆ. ಆಗ್ಗೆ ಇನ್ನೂ ತೊಂದರೆ ಅಮೇರಿಕೆಗೆ" ಎಂದು ಈ ವಲಯಗಳು ಅಭಿಪ್ರಾಯಪಟ್ಟಿವೆ.

"ಯುದ್ಧ ಸ್ತಂಭನ"

ಲೆಬನಾನಿನಲ್ಲಿ ಆಳುವ ಪ್ರತಿಗಾಮೀ ಸರಕಾರದ ವಿರುದ್ಧ ಕ್ರಾಂತಿ ಹೂಡಿರುವ ಬಂಡಾಯಗಾರರ ನಾಯಕರಾದ ಸಾಯಿಬ್ ಸಲಾಂ ಅಮೇರಿಕೆಯ ಸೇನೆಗಳು ಬಂದಿಳಿದ 24 ಗಂಟೆಗಳೊಳಗೇ ಆಜ್ಞೆಯೊಂದನ್ನು ಹೊರಡಿಸಿ "ಸರ್ಕಾರಿ ಸೈನ್ಯದ ವಿರುದ್ಧ ನಡೆಸುತ್ತಿರುವ ಯುದ್ಧವನ್ನು ನಿಲ್ಲಿಸಬೇಕು" ಎಂದು ಕೇಳಿಕೊಂಡಿದ್ದಾರೆ. ಇದರಿಂದಾಗಿ ಬೈರೂತ್ ನಗರ ಗುಂಡಿನ ಸದ್ದಿಲ್ಲದೆ ಶಾಂತವಾಗಿದೆ.

"ಮೂರ್ಖ ಕೆಲಸ"

ಅಮೇರಿಕೆಯ ಈ ಹಸ್ತಕ್ಷೇಪ ಇಂಗ್ಲಂಡಿನಲ್ಲಿ ಕಟುವಾದ ಟೀಕೆಗೆ ಒಳಗಾಗಿದೆಯೆಲ್ಲದೆ ಸುಪ್ರಸಿದ್ಧ "ಮಾಂಚೆಸ್ಟರ್ ಗಾರ್ಡಿಯನ್" ಪತ್ರಿಕೆ "ಉಸಿರು ಬಿಟ್ಟು ಉಸಿರು ತೆಗೆದುಕೊಳ್ಳುವಂತಹ ಮೂರ್ಖ ಕ್ರಮ" ಎಂದು ಹೇಳಿದೆ.

(ಕೊನೇ ಪುಟ ನೋಡಿ)

'ಲೆಬನಾನ್‌ನಿಂದ ಅಮೆರಿಕದ ಸೈನ್ಯ ವಾಪಸಾಗಲಿ'

ನಾಡಿನಾದ್ಯಂತ ಜನತಾ ಪ್ರತಿಭಟನೆ ನಡೆಯಲಿ !

ಸಂಪಾದಕೀಯ

ಹಿಂದಿ ಹೊರಿಸುವ ಬಲಾತ್ಕಾರ ಬೇಡ

ರಾಜ್ಯದಲ್ಲಿ ಸರಕಾರೀ ನೌಕರರೆಲ್ಲರೂ ಎರಡು ವರ್ಷಗಳಲ್ಲಿ ಹಿಂದಿ ಕಲಿಯಬೇಕೆಂದು ಸರಕಾರದ ತೀರ್ಮಾನವನ್ನು ಮುಖ್ಯ ಮಂತ್ರಿ ಜತ್ತಿಯವರು ಘೋಷಿಸಿದ್ದಾರೆ. ಹಾಗೆ ಕಲಿಯದಿದ್ದರೆ ಅಂಥವರಿಗೆ ಸಂಬಳ ಹಾಗೂ ಸ್ಥಾನದ ಬಡ್ತಿ ದೊರಕದೆಂದೂ ತಿಳಿಸಿದ್ದಾರೆ ಎಲ್ಲವನ್ನೂ ಬಿಟ್ಟು ಅವಸರದಲ್ಲಿ ಹಿಂದಿಯನ್ನು ಹೊರಿಸುವ ತೀರ್ಮಾನವನ್ನು ಜತ್ತಿಯವರು ಕೈಕೊಂಡಿರುವುದು ಹಾಸ್ಯಾಸ್ಪದವಾಗಿದೆ.

ರಾಜ್ಯದಲ್ಲಿನ ನಾನಾ ಪ್ರಶ್ನೆಗಳ ಬಗ್ಗೆ ಗಮನಿಸುವ ಬದಲು ಸರಕಾರ ಬಡ ನೌಕರರನ್ನು ಬೆದರಿಸಿ, ಬಲಾತ್ಕರಿಸಿ ಹಿಂದಿ ಹೊರಿಸುವ ಯೋಚನೆ ಮಾಡಿದೆಯೆಂದೇ ಹೇಳಬೇಕಾಗಿದೆ. ಸರಕಾರದ ಈ ತೀರ್ಮಾನದಿಂದ ನೌಕರರ ನಡುವೆ ಅತೃಪ್ತಿ ಹೆಚ್ಚುವುದಲ್ಲದೆ, ಹಿಂದಿಯ ಬಗ್ಗೆ ವಿರಸವೂ ಉಂಟಾಗುತ್ತದೆ.

ಸರಕಾರವು ಹಿಂದಿಯನ್ನು ಹೊರಿಸಲು ಹೊರಟಿರುವ ರೀತಿ ವಿಚಿತ್ರವಾಗಿದೆ ಹಾಗೂ ತೀವ್ರವಾಗಿ ಖಂಡಿಸಬೇಕಾದುದಾಗಿದೆ. ಸರಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಸಾಮಾನ್ಯ ನೌಕರರು ಇಷ್ಟು ಅವಸರದಲ್ಲಿ ಹಿಂದಿ ಕಲಿತು ಮಾಡಬೇಕಾದುದಾದರೂ ಏನಿದೆ ? ಸರಕಾರದ ಕೆಲಸ ಕಾರ್ಯಗಳಿಗೆ ಅದು ಹೇಗೆ ಭಾದಕವಾಗಿದೆ ಅಥವಾ ಮುಂದೆ ಆಗುವುದಿದೆ ? ಈ ಸಾಮಾನ್ಯ ನೌಕರರುಗಳು ಬೇರೆ ರಾಜ್ಯಗಳ ಸರಕಾರಗಳೊಂದಿಗೆ ವ್ಯವಹರಿಸುವುದು ಇದ್ದಲ್ಲಿ ಆಗ ಅದು ಅಗತ್ಯ ಎಂದು ಹೇಳಬಹುದು. ಆದರೆ ಅಂಥ ಪ್ರಮೇಯವೇ ಇಲ್ಲ. ಮುಖ್ಯವಾದ ಅಧಿಕಾರಿಗಳು ಹಿಂದಿ ಕಲಿಯಬೇಕು ಎನ್ನುವುದನ್ನು ಒಪ್ಪಬಹುದು. ಏಕೆಂದರೆ ಇತರ ರಾಜ್ಯಗಳೊಂದಿಗೆ ವ್ಯವಹರಿಸಲು ಅಗತ್ಯವಾದೀತು. ಆದರೆ ಅದಕ್ಕೂ ಸಹ ಇಂದು ಅವಸರದ ಪ್ರಮೇಯವೇನಿಲ್ಲ.

ಹಿಂದಿ ರಾಷ್ಟ್ರಭಾಷೆಯಾಗಬೇಕು ಎಂಬುದನ್ನು ಯಾರೂ ವಿರೋಧಿಸುತ್ತಿಲ್ಲ. ಆದರೆ ಅದನ್ನು ಕ್ರಮೇಣ ಜಾರಿಗೆ ತರಬೇಕೆಂಬುದೇ ವಾದವಾಗಿದೆ. ಅದರಲ್ಲೂ ಬಲತ್ಕಾರವಾಗಿ ಹಿಂದಿಯನ್ನು ಹೊರಿಸುವುದನ್ನು ಯಾರೂ ಒಪ್ಪಲಾರರು. ಪ್ರಧಾನಿ ನೆಹರೂರವರೇ ಹಿಂದಿಯನ್ನು ಬಲಾತ್ಕಾರವಾಗಿ ಹೊರಿಸ ಕೂಡದೆಂದು ಅಭಿಪ್ರಾಯ ವ್ಯಕ್ತಗೊಳಿಸಿದ್ದಾರೆ. ಅಂಥದರಲ್ಲಿ ಬಲಾತ್ಕಾರ ಮಾಡಹೊರಟರೆ ಅದು ಇನ್ನಷ್ಟು ಹಿಂದಿಗೆ ವಿರೋಧ ತರುವುದೇ ಹೊರತು, ಆದರವನ್ನು ತರುವುದಿಲ್ಲ.

ಮೈಸೂರು ಸರಕಾರದವರು ಬಡನೌಕರರ ಮೇಲೆ ಬಲಾತ್ಕಾರವಾಗಿ ಹಿಂದಿ ಹೊರಿಸ ಹೋಗಿರುವುದನ್ನು ಕಲಿಯದಿದ್ದವರಿಗೆ ಬಡ್ತಿ, ಇತ್ಯಾದಿಗಳನ್ನು ಕೊಡಲಾಗುವುದಿಲ್ಲವೆಂದು ಹೇಳಿರುವುದನ್ನು ತೀವ್ರವಾಗಿ ವಿರೋಧಿಸಬೇಕಾಗಿದೆ. ಸರಕಾರಿ ನೌಕರರು ಹಿಂದಿ ಕಲಿಯಲು ಬೇಕಾದ ಅನುಕೂಲತೆಗಳನ್ನು ಸರಕಾರ ಕಲ್ಪಿಸಲಿ. ಹಿಂದಿ ಕಲಿಯಲು ಪ್ರೋತ್ಸಾಹ ಮತ್ತು ಸಹಾಯಗಳನ್ನು ನೀಡಲಿ. ಅದು ಬಿಟ್ಟು ಬಲವಂತದ ಮಾಘಸ್ನಾನ ಬೇಡ.

ಹಿಂದಿಯ ಬಗ್ಗೆ ಇಷ್ಟು ಅವಸರ ವ್ಯಾಮೋಹವನ್ನು ಪ್ರದರ್ಶಿಸ ಹೊರಟಿರುವ ಜತ್ತಿಯವರು ನೀತಿ, ಕನ್ನಡ ಮತ್ತಿತರ ರಾಜ್ಯದಲ್ಲಿನ ಅಲ್ಪ ಸಂಖ್ಯಾಕರ ಭಾಷೆಗಳ ಬಗ್ಗೆ ಏನಿದೆ ? ಸರಕಾರಿ ನೌಕರರೆಲ್ಲ ಕನ್ನಡ ಕಲಿಯಬೇಕೆಂದಾಗಲಿ, ಕನ್ನಡ ಬಾರದವರ ಬಡ್ತಿ ತಡೆಹಿಡಿಯಲ್ಪಡುವುದೆಂದಾಗಲಿ ಹೇಳಿದ್ದಾರೆಯೆ ? ಅಥವಾ ರಾಜ್ಯದ ಪ್ರಮುಖ ಅಲ್ಪ ಸಂಖ್ಯಾಕರ ಭಾಷೆಗಳಾದ, ತೆಲುಗು, ತಮಿಳು, ಮರಾಠಿ ಅಥವಾ ಉರ್ದು ಇವುಗಳನ್ನು ನೌಕರರು ಕಲಿತರೆ ರಾಜ್ಯದ ಸುಗಮ ಆಡಳಿತಕ್ಕೆ ಒಳ್ಳೆಯದಲ್ಲವೇ ? ಈಗಾಗಲೇ ಅನೇಕ ನೌಕರರು ಈ ಅಲ್ಪ ಸಂಖ್ಯಾಕ ಭಾಷೆಗಳಗಳನ್ನು ಸರ್ಕಾರದ ದಂಡನೀತಿಯಿಲ್ಲದಿದ್ದಾಗ್ಯೂ ತಾವಾಗಿಯೇ ಕಲಿಯುತ್ತಿಲ್ಲವೇ ? ಇದೆಲ್ಲವನ್ನು ನೋಡುವಾಗ ಜತ್ತಿಯವರ ಈ ಹೊಸ ನೀತಿ ಅಗತ್ಯವಿಲ್ಲದ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರವಾಗಲಿದೆ, ಮುಂಬಯಿ, ಹೈದರಾಬಾದು, ಕರ್ನಾಟಕ ಪ್ರದೇಶಗಳಿಂದ ಬಂದಿರುವ ನೌಕರರಿಗೂ ಇತರ ನೌಕರರಿಗೂ ನಡುವೆ ತಿಕ್ಕಾಟ ಪೈಪೋಟಿ ಹುಟ್ಟಿಸುವ ಅಪಾಯವನ್ನು ಒಳಗೊಂಡಿದೆ.

ಸರಕಾರೀ ನೌಕರರಿಗೆ ಹಿಂದಿ ಶಿಕ್ಷಣ ನೀಡುವಂಥ ಸಂಸ್ಥೆಗಳಿಗೆ ಸರಕಾರ ಹಣ ಸಹಾಯ ನೀಡುವುದೆಂಪು ಹೇಳಲಾಗಿದೆ. ಹಿಂದಿ ಪ್ರಚಾರ ಸಮಿತಿಗಳಿಗೆ ಈಗಾಗಲೇ ಸರಕಾರದ ನೆರವು ಬೇಕಾದಷ್ಟು ದೊರೆಯುತ್ತಿದೆ. ಈ ಸಂಸ್ಥೆಗಳಿಗೆ ನೆರವೀಯುವುದರ ಬದಲು ನೌಕರರಿಗೆ ನೇರವಾಗಿ ಸಹಾಯನೀಡಿದಲ್ಲಿ ಕಾರ್ಯ ಸಫಲವಾದೀತು.

ಶಾಲೆಗಳಲ್ಲಿ ಹಿಂದಿ ಕಲಿಸುವುದು ಈಗಾಗಲೇ ಆರಂಭವಾಗಿದೆ. ಇದು ಮುಂದುವರಿದಲ್ಲಿ ಕ್ರಮೇಣ ಎಲ್ಲರಿಗೂ ಹಿಂದಿ ಬಂದೇ ಬರುತ್ತದೆ. ನಿಧಾನವಾಗಿ ಕೆಳಗಿನಿಂದ ಆರಂಭಿಸುವ ಬದಲು ಮೇಲಿನಿಂದ ಬಲಾತ್ಕಾರವಾಗಿ ತುರುಕುವುದರಿಂದ ಪ್ರಯೋಜನವಿಲ್ಲ. ಆದರಿಂದ ಸರಕಾರ ಈ ಅನ್ಯಾಯದ ತೀರ್ಮಾನವನ್ನು ಬದಲಿಸಲಿ.

ಮೊಸಳೆಯ ಕಣ್ಣೀರಿನಿಂದ

ಹಸಿವೆಯ ಬೆಂಕಿ ಆರಲಾರದು

ಎನ್.ಎಲ್. ಉಪಾಧ್ಯಾಯ

ಮಳೆಗಾಲ ಆರಂಭವಾದಾಗ ಬೆಲೆಗಳು ಏರುವುದೊಂದು ನಮ್ಮ ದೇಶದಲ್ಲಿ ಹಿಂದಿನಿಂದಲೂ ರೂಢಿಯಾಗಿ ಬಂದಿದೆ. ಆದರೆ ಈಗ ಬೆಲೆ ಏರಿಕೆಗೆ ಕಾಲ, ಋತು, ಮಾಸ ಎಂಬುದು ಯಾವುದೂ ಇಲ್ಲವೆಂದು ಕಾಣುತ್ತದೆ. ಏರಿದ ಬೆಲೆ ಇಳಿಮುಖವಾಗುವುದು ಬಹಳ ಅಪರೂಪ. ಮಳೆಗಾಲ ಆರಂಭವಾದ ಮೇಲೆ ಕೇಳಬೇಕಾದದ್ದೇ ಇಲ್ಲ.

ಹೋಲ್‌ಸೇಲ್ ದರಗಳ ಸೂಚ್ಯಂಕ *

1952 — 53ರ ಬೆಲೆ = 100

ಇಸವಿಗಳು	ಆಹಾರ ವಸ್ತುಗಳು	ಎಲ್ಲ ವಸ್ತುಗಳು
1954—55	94·5	97·5
1955—56	86·6	92·4
1956—57	102·2	105 2
1957—58		
(ಜನವರಿ)	102 5	106 0
(ಮೇ)	107·2	108·2
ಜೂನ್ ತಿಂಗಳಲ್ಲಿ		
7—6—58	110·1	109 8
14—6—58	111 8	110·7
21—6—58	115·7	112 9

*[ಅಂಕಿಗಳು : ಈಸ್ಟರ್ನ್ ಇಕೊನೊಮಿಸ್ಟ್ ಪತ್ರಿಕೆಯಿಂದ].

ಸಿಕ್ಕಾಬಟ್ಟೆ ಏರಿಕೆ

ಆಹಾರ ಧಾನ್ಯಗಳ ಮತ್ತಿತರ ವಸ್ತುಗಳ ಬೆಲೆಗಳು ಮಿತಿಮೀರಿ ಏರಿರುವ ಮತ್ತು ಏರುತ್ತಿರುವ ಸುದ್ದಿ ನಮ್ಮ ರಾಜ್ಯದ ಮೂಲೆ ಮೂಲೆಗಳಿಂದಲೂ ಬರುತ್ತಿದೆ. ಮಂಗಳೂರಲ್ಲಿ ಅಕ್ಕಿಯ ಬೆಲೆ ಸೇರಿಗೆ 7 ಆಣೆಯಿಂದ 9½ ಆಣೆಗೆ ಏರಿದೆಯೆಂದು ತಿಳಿದಿದೆ. ಬೆಂಗಳೂರಲ್ಲಿ ರೂಪಾಯಿಗೆ 1¾ ಸೇರು ಅಕ್ಕಿ ಇದ್ದದ್ದು ಈಗ 1½ ಸೇರು ಆಗಿದೆ. ಹೋದ ವಾರದಲ್ಲಿ ಪಲ್ಲ ಒಂದಕ್ಕೆ ರೂ. 60 ಇದ್ದದ್ದು ಈಗ ಒಂದು ವಾರದಲ್ಲೇ ರೂ. 70 ಆಗಿದೆ. ರಾಗಿ, ಜೋಳ ಮತ್ತಿತರ ಆಹಾರ ಧಾನ್ಯಗಳ ಬೆಲೆಗಳೂ ಏರುತ್ತಿವೆ. ಬೇಳೆ ರೂ.ಗೆ 1½ ಸೇರಿನಿಂದ 1¼ ಸೇರಾಗಿದೆ. ಜೀರಿಗೆ ಸಂಚೇರಿಗೆ ರೂ. 4—8—0ಯಿಂದ 7—8—0 ಆಗಿದೆ. ಸಕ್ಕರೆ, ಕೊಬ್ರಿ, ಹೆಸರು ಬೇಳೆ, ಕಡಲೆ ಬೇಳೆ ಮುಂತಾದ ವಸ್ತುಗಳ ಬೆಲೆಗಳೂ ಶೇಕಡ 10ರಿಂದ 50ರ ತನಕ ಹೆಚ್ಚಾಗಿವೆ. ಸಾಮಾನ್ಯವಾಗಿ ಎಲ್ಲರೂ ಉಪಯೋಗಿಸುವ ಅಡಿಕೆಯ ಬೆಲೆ 6-12-0 ರಿಂದ 9 ರೂ. ಆಗಿದೆ.

ಇತರ ಕೆಲ ವಸ್ತುಗಳ ಬೆಲೆ ಏರಿಕೆಗೆ ಮಿತಿಯೇ ಇಲ್ಲದಾಗಿದೆ. ದಾಲಚಿನಿ ಮಣ ಒಂದಕ್ಕೆ ರೂ. 55-0-0ರಿಂದ ರೂ. 140—0—0ಕ್ಕೇರಿದೆ. ಲವಂಗ ಮಣಕ್ಕೆ ರೂ. 120ರಿಂದ 260 ಆಗಿದೆ. ಪಚ್ಚಕರ್ಪೂರ ರೂ. 18ರಿಂದ 40 ರೂ. ಪೌಂಡಿಗಾಗಿದೆ. ಮೆಂಥೋಲ್ ಪೌಂಡಿಗೆ ರೂ. 32ರಿಂದ 52ಕ್ಕೂ, ಪಾದರಸ ರೂ. 20ರಿಂದ 50ಕ್ಕೂ, ರಸ ಕರ್ಪೂರ ರೂ. 23ರಿಂದ 52ಕ್ಕೂ, ಜಾಕಾಯಿ ಪೌಂಡಿಗೆ ರೂ. 12ರಿಂದ 32ಕ್ಕೂ, ದ್ರಾಕ್ಷಿ ಮಣಕ್ಕೆ ರೂ. 36ರಿಂದ 80ಕ್ಕೂ ಏರಿದೆ. ಟಾರ್ಟರಿಕ್ ಆಸಿಡ್ ರೂ. 160ರಿಂದ 300ಕ್ಕೇರಿದೆ.

ಇದರಲ್ಲಿ ಕೆಲವು ಪದಾರ್ಥಗಳು ಕೈಗಾರಿಕೆಯಲ್ಲಿ ಉಪಯೋಗವಾಗುತ್ತಿದ್ದು ಸಣ್ಣಪುಟ್ಟ ಉದ್ಯಮಿಗಳಿಗೆ ಅಪಾರ ಕಷ್ಟವಾಗಿದೆ. ಕೊನೆಯಲ್ಲಿ ಇದರ ಹೊರೆಯೂ ಸಾಮಾನ್ಯ ಜನತೆಯ ಮೇಲೆಯೇ ಬೀಳುವುದೆಂಬುದನ್ನು ಗಮನಿಸತಕ್ಕದ್ದು.

ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಜನಕೋಟಿಗೆ ಸಹಿಸಲಾರದ ಕಷ್ಟವಾಗಿದೆ. ದುಡಿದು ಜೀವನ ನಡಿಸುವ ಕಾರ್ಮಿಕ ವರ್ಗ, ಮಧ್ಯಮ ವರ್ಗ ಮತ್ತು ಬಡರೈತರಿಗೆ ಇದರ ದುಷ್ಪರಿಣಾಮ ತಗಲುತ್ತದೆ. ಅವರಿಗೆ ಬರುವ ಆದಾಯ ಒಂದೇ ರೀತಿಯಾಗಿದ್ದು ಅವರು ಕೊಂಡುಕೊಳ್ಳುವ ಪದಾರ್ಥಗಳ ಬೆಲೆಗಳು ಮಾತ್ರ ಏರಿರುವುದರಿಂದ ಅವರ ಜೀವನ ಸ್ಥಿತಿ ವಿಷಮಗೊಳ್ಳುತ್ತಿದೆ.

ಕಾರಣವೇನು ?

ಆಳುವ ವರ್ಗ ಇದರ ಬಗ್ಗೆ ಗಮನ ಕೊಡದಿರುವುದು ಖಂಡನೀಯವಾಗಿದೆ. ಈ ಪರಿಸ್ಥಿತಿಗೆ ಸರಕಾರದ ಪ್ರತಿಗಾಮಿ ಧೋರಣೆಯೇ ಕಾರಣವೆಂಬುದನ್ನು ಪ್ರತ್ಯೇಕ ಹೇಳಬೇಕಾಗಿಲ್ಲ. ಹೆಚ್ಚು ಆಹಾರ ಬೆಳೆಯುವ ಬಗ್ಗೆ ಭಾಷಣಗಳೂ, ಪ್ರಚಾರವೂ ನಿರಂತರವಾಗಿ ನಡೆಯುತ್ತಿರುವುದು ನಿಜ; ಕೋಟ್ಯಾಂತರ ರೂಪಾಯಿ ಪೋಲಾಗುವುದೂ ನಿಜ. ಆದರೆ ಉತ್ಪಾದನೆ ಮಾತ್ರ ಹೆಚ್ಚಾಗುತ್ತಿಲ್ಲ. ಹೋದ ವರ್ಷ ನಮ್ಮ ದೇಶದಲ್ಲಿ ಅಕ್ಕಿ ಉತ್ಪಾದನೆ ಶೇ. 12ರಷ್ಟು ಕಡಿಮೆಯಾಗಿದೆಂದು ಪ್ರಕಟವಾಗಿರುತ್ತದೆ. ಇದರ ಪರಿಣಾಮ ನಮ್ಮ ರಾಜ್ಯದ ಮೇಲೂ ಆಗಿದೆ. ಬೆಲೆಗಳು ಏರುತ್ತಲೇ ಇವೆ. ಉತ್ಪಾದನೆ ಹೆಚ್ಚಾಗದಿರುವುದು ಮತ್ತು ಹಣದುಬ್ಬರದಿಂದಾಗಿ ಈ ಪರಿಸ್ಥಿತಿ ಒದಗಿದೆ. ಬ್ಯಾಂಕುಗಳು ದಾಸ್ತಾನುಗಾರರಿಗೆ ಧಾನ್ಯ ಶೇಖರಣೆಗೆ ಮುಂಗಡ ಸಾಲ ಕೊಟ್ಟಿರುವುದೂ ಇದಕ್ಕೊಂದು ಮುಖ್ಯ ಕಾರಣವಾಗಿದೆ. ಆಹಾರ ಧಾನ್ಯಗಳ ವಿಷಯದಲ್ಲಿ ದೊಡ್ಡ ವ್ಯಾಪಾರಸ್ಥರಿಗೆ ಬ್ಯಾಂಕುಗಳು ಮುಂಗಡ ಹಣ ಕೊಡುವುದನ್ನು ಮಿತಿಗೊಳಿಸಬೇಕೆಂದು ರಿಸರ್ವ್ ಬ್ಯಾಂಕು ಹುಕುಂ ಹೊರಡಿಸಿತ್ತು. ಆದರೆ ಬ್ಯಾಂಕುಗಳು ಅದನ್ನು ಪಾಲಿಸದೆ ದಾಸ್ತಾನುಗಾರರಿಗೆ ಧಾನ್ಯಗಳನ್ನು ಅಧಿಕ ಪ್ರಮಾಣದಲ್ಲಿ ಕೊಂಡು ಶೇಖರಣೆ ಮಾಡಲು ಸಹಾಯ ಮಾಡಿವೆಂಬ ವರದಿ ಬಂದಿದೆ. ಇದರಿಂದ ಸುಗ್ಗಿ ಕಾಲ

(೯ನೇ ಪುಟ ನೋಡಿ)

ವಾರದ ವಾರ್ತಾ ಸಮೀಕ್ಷೆ

ಕಾಂಗ್ರೆಸ್ಸಿನ ಪುನರ್ಸಂಘಟನೆ !

ಕಾಂಗ್ರೆಸ್ಸಿನ ಪುನರ್ಸಂಘಟನೆ ಮಾಡುವ ಮತ್ತು ಅದರ ಸಂಘಟನೆಯನ್ನು ಬಲಗೊಳಿಸುವ ಸಾಹಸ ಕಾರ್ಯ ನಡೆಯುತ್ತಿದೆ. ಕಳೆದ ಮಹಾ ಚುನಾವಣೆಗಳ ನಂತರ, ಕಾಂಗ್ರೆಸ್ಸಿನ ಈ ಸಂಘಟನಾ ಕಾರ್ಯ ಗೊಂದಲದಲ್ಲಿ ಸಾಗುತ್ತಿದೆ. "ಜನಸಮೂಹಗಳೊಂದಿಗೆ ನಿಕಟ ಸಂಪರ್ಕ", "ಶಿಸ್ತು", "ರಚನಾತ್ಮಕ ಕಾರ್ಯ" ಮೊದಲಾದ ಅನೇಕ ಘೋಷಣೆಗಳು ಕೇಳಿಬರುತ್ತಿವೆ.

ಕಾಂಗ್ರೆಸ್ ಅಧ್ಯಕ್ಷ ಢೇಬರರು ಒಂದಾದ ಮೇಲೊಂದು ಪಂಚ ವಾರ್ಷಿಕ ಯೋಜನೆಗಳನ್ನು ಸಂಸ್ಥೆಯ ಮುಂದಿರಿಸುತ್ತಿದ್ದಾರೆ. ಮೊದಲು ಹನ್ನೊಂದು ಅಂಶಗಳ ಯೋಜನೆಯನ್ನು ಕಾಂಗ್ರೆಸ್ ಕಾರ್ಯಕರ್ತರ ಮುಂದಿರಿಸಿದರು, ನಂತರ ಅದು ಏಳು ಅಂಶಗಳಾಯಿತು, ಇದೀಗ ಅದು ಐದು ಅಂಶಗಳಾಗಿವೆ. ಇನ್ನು ಇದು ಎಷ್ಟು ಅಂಶಗಳಾದೀತು ಎಂದು ಕಾದು ನೋಡಬೇಕಿದೆ.

ಮಂಡಲ ಕಾಂಗ್ರೆಸ್ ಸಮಿತಿಗಳೇ ಜೀವನಾಡಿ. ಅವು ಜನಸಮೂಹದೊಂದಿಗೆ ನೇರ ಸಂಪರ್ಕ ಬೆಳೆಸತಕ್ಕದ್ದು. ಬುಡದಿಂದ ಸಂಘಟನೆಯನ್ನು ಸುವ್ಯವಸ್ಥಿತಗೊಳಿಸಲಾಗುವುದು ಎಂದು ಹೇಳಲಾಗುತ್ತಿದೆ. ಒಂದೆಡೆ ಹೀಗೆ ಕಾಂಗ್ರೆಸ್ ನಾಯಕತ್ವವು ಬುಡದಿಂದ ಪುನರ್ಘಟಿಸಲು ಹೊರಟಿದ್ದರೆ, ಮೇಲಿನಿಂದ ಅದು ಕುಸಿದುಬೀಳುತ್ತಿದೆ. ಶಿಸ್ತು ಪರಿಪಾಲನೆ ಬೇಕಾದಷ್ಟು ಹೇಳುತ್ತಿದ್ದರೂ ಅದು ಸಡಿಲಗೊಳ್ಳುತ್ತಲೇ ಇದೆ. ಕಾಂಗ್ರೆಸ್ ನಾಯಕರುಗಳು, ಸಚಿವರುಗಳು ಮಂಡಲ ಕಾಂಗ್ರೆಸ್ ಸಮಿತಿಗಳಿಗೆ ಜೀವತುಂಬಲು ತೀವ್ರಯತ್ನ ನಡೆಸುತ್ತಿದ್ದಾರೆ. ಅದು ಎಷ್ಟು ಮಟ್ಟಿಗೆ ಫಲಿತವಾದೀತೆಂಬುದನ್ನು ವಿವರಿಸುವುದನಗತ್ಯ.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ—ಭೂಸುಧಾರಣೆ

ನವದೆಹಲಿಯಲ್ಲಿ ಜುಲೈ ೧೨—೧೩ರಂದು ನಡೆದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ಭೂಸುಧಾರಣೆಗಳನ್ನು ಜಾರಿಗೆ ತರಲು ಕಾಂಗ್ರೆಸ್ ಅಧ್ಯಕ್ಷ ಡೇಬರ್, ಗೃಹ ಸಚಿವ ಗೋವಿಂದ್ ವಲ್ಲಭ್ ಪಂತ್ ಮತ್ತು ಹಣಕಾಸಿನ ಸಚಿವ ಮೊರಾರ್ಜಿ ದೇಸಾಯಿಯವರನ್ನೊಳಗೊಂಡ ಉನ್ನತಾಧಿಕಾರ ಸಮಿತಿಯನ್ನು ರಚಿಸಿದೆ.

ಕಾರ್ಯಕಾರೀ ಸಮಿತಿಯು ರಾಜ್ಯಗಳಲ್ಲಿ ಭೂಸುಧಾರಣೆಯನ್ನು ಜಾರಿಗೆ ತರುವುದು ವಿಳಂಬವಾಗುತ್ತಿರುವುದನ್ನು ಪರಿಶೀಲಿಸಿ ಅದನ್ನು ತ್ವರಿತಗೊಳಿಸಲು ಈ ಸಮಿತಿಯನ್ನು ರಚಿಸಿದೆ. ರಾಜ್ಯ ಸರಕಾರಗಳ ಮುಖ್ಯ ಮಂತ್ರಿಗಳು ಭೂಸುಧಾರಣೆಗಳನ್ನು ಜಾರಿಗೆ ತರುವ ಬಗ್ಗೆ ಇರುವ ಕಷ್ಟನಷ್ಟ ತೋಡಿಕೊಂಡಿದ್ದಾರೆಂದೂ ತಿಳಿದುಬಂದಿದೆ.

ಗೌಹಾತಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಭೂಸುಧಾರಣೆಗಳ ಬಗ್ಗೆ ತೀವ್ರವಾದ ಚರ್ಚೆ ನಡೆದು, ರಾಜ್ಯಗಳಲ್ಲಿ ಭೂಸುಧಾರಣೆಯನ್ನು ಜಾರಿಗೆ ತರುವ ಕಾರ್ಯವು ಮಂದಗತಿಯಿಂದ ಸಾಗುತ್ತಿದೆ ಎಂದು ಕಳವಳ ವ್ಯಕ್ತಗೊಳಿಸಲಾಯಿತು. ಈ ಕಾರ್ಯವನ್ನು ತ್ವರಿತಗೊಳಿಸಬೇಕೆಂದು ಕರೆಕೊಡಲಾಯಿತು. ಆದರೂ ಅದು ಯಥಾಪ್ರಕಾರ ಹಿಂದಿನ ಅವಸ್ಥೆಯಲ್ಲಿಯೇ ಆರೆಮನಸ್ಸಿನಿಂದ ಜರುಗುತ್ತಲಿದೆ. ಕೆಲವು ರಾಜ್ಯ ಸರಕಾರಗಳು ಭೂಸುಧಾರಣಾ ಕಾಯಿದೆಯನ್ನೇ ತಯಾರಿಸಲು ಮೀನಮೇಷ ಎಣಿಸಿ ಕಾಲ ತಳ್ಳುತ್ತಿವೆ ಅಂದ ಮೇಲೆ ಈ ಉನ್ನತಾಧಿಕಾರಿ ಸಮಿತಿ ಎಷ್ಟು ಮಟ್ಟಿಗೆ ಸಾಧಿಸುವುದೆಂಬುದು ತಿಳಿಯುತ್ತದೆ. ಉಳಿದೆಲ್ಲ ಸಮಿತಿಗಳಂತೆಯೇ ಇದೂ ಒಂದು.

ಮತ್ತೊಂದು ರೈಲ್ವೆ ದುರಂತ

ಬನಾರಸ್ ಬಳಿ ಔಧ್—ತಿರ್ಹುತ್ ಮೈಲ್ ಗಾಡಿಯು ಜುಲೈ ೧೩ರಂದು ಕಂಬಿಯಿಂದ ಕಳಚಿ ಬಿದ್ದು ನಾಲ್ವರು ಮರಣ ಹೊಂದಿ, ಸುಮಾರು ೨೨ ಮಂದಿಗೆ ಘಾಯವಾಗಿದೆ. ರೈಲ್ವೆ ದುರಂತಗಳ ಮಾಲೆಯಲ್ಲಿ ಇದು ಇನ್ನೊಂದು. ಈ ದುರಂತದ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಲಾಗಿದೆ. ರೈಲ್ವೆ ದುರಂತಗಳು ಏಕಪ್ರಕಾರವಾಗಿ ನಡೆಯುತ್ತಲೇ ಇರುವುದರಿಂದಾಗಿ ಪ್ರಯಾಣದ ಭರವಸೆಯೇ ಇಲ್ಲವಾಗಿದೆ. ಸರಕಾರವು ಈ ಬಗ್ಗೆ ಕೂಡಲೇ ಸೂಕ್ತವಾದ ಕ್ರಮ ಕೈಗೊಂಡು ಸುರಕ್ಷಿತ ಪ್ರಯಾಣದ ಭರವಸೆಯನ್ನು ಜನತೆಗೀಯುವುದೇ ?

ಕೇರಳದಲ್ಲಿ ಕಾಂಗ್ರೆಸು—ಪಿ. ಎಸ್. ಪಿ. ಬೆದರಿಕೆ

ಕೇರಳ ರಾಜ್ಯ ವಿಧಾನ ಸಭೆಯಲ್ಲಿ, ಮುಖ್ಯ ಮಂತ್ರಿ ಇ. ಎಂ. ಎಸ್.ರವರ "ಅಂತರ್ಯುದ್ಧ" ಭಾಷಣದ ಮೇಲೆ ಚರ್ಚೆಯ ನಂತರದಲ್ಲಿ, ವಿರೋಧ ಪಕ್ಷದ ನಾಯಕರಾದ ಪಿ. ಟಿ. ಚಾಕ್ಕೋರವರು ಮಾತನಾಡುತ್ತ, ಕಮ್ಯೂನಿಸ್ಟರನ್ನು ಪ್ರತ್ಯೇಕಿಸಲು, ಅವರ ಮೂಲೋತ್ಪಾಟನ ಮಾಡಲು ನಾವು ನಿರ್ಧರಿಸಿದ್ದೇವೆ ಆ ದೆಶೆಯಲ್ಲಿಯೇ ನಾವು ದುಡಿಯಲು ಕಂಕಣ ಕಟ್ಟಿದ್ದೇವೆ ಎಂದು ಘೋಷಿಸಿದ್ದಾರೆ. ಅದೇ ರೀತಿಯಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕರುಗಳೂ ಘೋಷಿಸಿದ್ದಾರೆ. ಜನತೆಯು "ಅಂತರ್ಯುದ್ಧ" ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗಬೇಕೆಂದು ಕರೆಯಿತ್ತಿದ್ದಾರೆ.

ವಿರೋಧ ಪಕ್ಷದಲ್ಲಿರುವ ಕಾಂಗ್ರೆಸು—ಪ್ರಜಾ ಸೋಷಲಿಸ್ಟ್ ನಾಯಕತ್ವವು, ಸರಕಾರದ ನೀತಿಗಳ ಬಗ್ಗೆ ರಚನಾತ್ಮಕವಾದ ಟೀಕೆಯನ್ನು ಮಾಡಿ, ಅಭಿವೃದ್ಧಿ ಕಾರ್ಯ ಯಶಸ್ವಿಯಾಗುವಂತೆ ನೆರವೀಯುವುದರ ಬದಲಾಗಿ ಕಮ್ಯೂನಿಸ್ಟ್ ಪಾರ್ಟಿಯ ವಿರುದ್ಧ ದ್ವೇಷ ಕಾರುವುದೇ ತಮ್ಮ ಕಾರ್ಯಕ್ರಮವಾಗಿ ಮಾಡಿಕೊಂಡಿರುವುದು ಖಂಡನೀಯವಾಗಿದೆ. ಜನತೆಯ ಬೆಂಬಲ ವಿಶ್ವಾಸಗಳನ್ನು ಈಗಾಗಲೇ ಕಳೆದುಕೊಂಡಿರುವ ಈ ಪಕ್ಷಗಳ ನಾಯಕತ್ವವು ಮತ್ತೂ ಕಳೆದುಕೊಳ್ಳುವುದರಲ್ಲಿ ಸಂಶಯವಿಲ್ಲ.

ಮಸಾನಿ ಮತ್ತು ಅಶೋಕ ಮೆಹ್ತಾಗಳು

ಅಮೇರಿಕನ್ ಪ್ರಚೋದಿತ ಭಾರತದಲ್ಲಿರುವ ಹಂಗೇರಿಯನ್ ಸೌಹಾರ್ದ ಸಮಿತಿಯವರು ಹಂಗೇರಿಯಲ್ಲಿ ಇಮ್ರೆ ನಾಜ್ ಮತ್ತವನ ಗುಂಪಿನ ಮರಣ ದಂಡನೆಯ ವಿರುದ್ಧ ಬೇಕಾದಷ್ಟು ಅಪಪ್ರಚಾರ ನಡೆಸುತ್ತಿದ್ದಾರೆ. ಕಮ್ಯೂನಿಸಂನ ಕಡುವಿರೋಧಿಗಳಾದ ಅಶೋಕ ಮೆಹ್ತಾ, ಮಸಾನಿ ಮತ್ತು ಜನಸಂಘದ ರಾಜಕೀಯ ವಾದಿಗಳು ಇದರಲ್ಲಿ ಮುಂದಾಳುತನ ವಹಿಸಿದ್ದಾರೆ. ದೊಡ್ಡ ದೊಡ್ಡ ಪತ್ರಿಕಾ ಮಾಲಿಕರುಗಳ ಸಹಾಯದಿಂದ, ಅಮೇರಿಕದ ಹಣದಿಂದ ಪ್ರಚಾರ ನಡೆಸಿದ್ದಾರೆ. 1956 ರಲ್ಲಿ ಹಂಗೇರಿಯಲ್ಲಿ ನಡೆದ ಕ್ರಾಂತಿಯನ್ನು ಯಶಸ್ವಿಯಾಗಿ ಎದುರಿಸಿ, ಫಾಸಿಸಂ ಅಲ್ಲಿ ಪುನರಾವತಾರವಾಗುವುದನ್ನು ತಡೆಗಟ್ಟಿ, ಸಮಾಜವಾದವನ್ನು ರಕ್ಷಿಸಿದ್ದು, ಅಶೋಕ ಮೆಹ್ತಾ—ಮಸಾನಿ ಗುಂಪಿಗೆ ಅಮಾನುಷ ಕೃತ್ಯವಾಗಿದೆ.

ಇಮ್ರೆನಾಜ್ ಮತ್ತವನ ಗುಂಪಿನ ಮರಣ ದಂಡನೆಯ ವಿರುದ್ಧ ಹಾರಾಡುತ್ತಿರುವ ಈ ಮಹಾ ವ್ಯಕ್ತಿಗಳು, ರೋಸನ್‌ಬರ್ಗ ದಂಪತಿಗಳದ್ದು ಅಮೆರಿಕ ಮರಣ ದಂಡನೆಗೀಡು ಮಾಡಿದಾಗ ಸುಮ್ಮನೇಕಿದ್ದರು ? ಆಲ್ಜೀರಿಯದಲ್ಲಿ ಜಾಮಿಲಿಯ ಮರಣ ದಂಡನೆಯು ನಡೆಯಬೇಕಿದ್ದಾಗ್ಗೆ ಏಕೆ ಸುಮ್ಮನಿದ್ದರು ? ಈಚೆಗಿನ ವರ್ಷಗಳಲ್ಲಿ ಕೆನಿಯಾದಲ್ಲಿ 2000ಕ್ಕಿಂತಲೂ ಹೆಚ್ಚು ಮಂದಿಯನ್ನು ಕೊಲ್ಲಲಾಗಿರುವುದರ ಬಗ್ಗೆ ಇವರು ಏನು ಹೇಳುತ್ತಾರೆ ಅಥವಾ ಆಲ್ಜೀರಿಯದಲ್ಲಿ ದಿನನಿತ್ಯ ಸ್ವಾತಂತ್ರ್ಯ ಯೋಧರ ಕಗ್ಗೊಲೆ ನಡೆಯುತ್ತಿರುವುದರ ಬಗ್ಗೆ ಏನು ಹೇಳುತ್ತಾರೆ ?

—"ರಮೇಶ್"

ಸ್ಥಳದರಲ್ಲಿ ಸುದ್ದಿ

"ಭಾರತದ ಸುಪ್ರೀಂ ಕೋರ್ಟ್ ಪ್ರಪಂಚದಲ್ಲೇ ದೊಡ್ಡದಾದುದು. ಅಲ್ಲಿ 1,000ದಷ್ಟು ಸಿವಿಲ್ ಮತ್ತು ಕ್ರಿಮಿನಲ್ ದಾವಾಗಳು ಪೆಂಡಿಂಗ್‌ನಲ್ಲಿ ಬಿದ್ದಿವೆ. ಅಲ್ಲದೆ 3 ವರುಷಗಳ ಇನ್‌ಕಂಟ್ಯಾಕ್ಸ್ ಕೆಲಸ ಬಾಕಿಯಾಗಿ ಬಿದ್ದಿದೆ" ಎಂಬುದಾಗಿ ಸುಪ್ರೀಂ ಕೋರ್ಟ್ ನ್ಯಾಯಧಿಕಾರಿಗಳಾದ ಶ್ರೀ ಟಿ. ಎಲ್. ವೆಂಕಟರಾಮ್ ಐಯರ್‌ರವರು ಕೊಯಮತ್ತೂರಿನಲ್ಲಿ ಒಂದೆಡೆ ಮಾತನಾಡುತ್ತ ಹೇಳಿದರು. ಈಗ ಅಲ್ಲಿ ಕೇವಲ 11 ಜನ ನ್ಯಾಯಾಧೀಶರುಗಳಿರುವರೆಂದೂ ಈ ಸಂಖ್ಯೆ ಕೊನೆಯ ಪಕ್ಷ 15ಕ್ಕಾದರೂ ಏರಬೇಕೆಂದೂ ಅವರು ತಮ್ಮ ವೈಯುಕ್ತಿಕ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಂ ಂ ಂ

ಕೇರಳದಲ್ಲಿ ರೇಯಾನ್ ತಿರುಳು ಕಾರ್ಖಾನೆಯೊಂದನ್ನು ಆರಂಭಿಸುವುದಕ್ಕಾಗಿ ಬಿರ್ಲಾಗಳೊಡನೆ ಕೇರಳ ಸರ್ಕಾರವು ಮಾಡಿಕೊಂಡಿರುವ ಒಪ್ಪಂದದಲ್ಲಿ ಕಾರ್ಮಿಕರ ಹಿತಚಿಂತನೆಗೆ ವಿರೋಧವಾದ ವಿಷಯವೇನೂ ಇಲ್ಲವೆಂದು ಕೈಗಾರಿಕಾ ಸಚಿವ ಶ್ರೀ ಕೆ. ಪಿ. ಗೋಪಾಲನ್ ತಿಳಿಸಿದ್ದಾರೆ.

ಂ ಂ ಂ

ಬಂಗಾಲದ ಶ್ರೇಷ್ಠ ಸಾಹಿತಿ ಬಂಕಿಮಚಂದ್ರ ಚಟ್ಟೋಪಾಧ್ಯಾಯರ 120ನೆಯ ಜನ್ಮದಿನೋತ್ಸವವನ್ನು (27—6—58) ರಂದು ಮಾಸ್ಕೋವಿನಲ್ಲಿ ಆಚರಿಸಲಾಯಿತು. ಮಾಸ್ಕೋವಿನಲ್ಲಿಯ ಭಾರತೀಯರು ಈ ಸಂದರ್ಭದಲ್ಲಿ ಹಾಜರಿದ್ದರು. ಭಾಷಾಶಾಸ್ತ್ರವಿಶಾರದೆ ಎ. ವಿ. ನೋವಿಕೋವ್‌ರವರು ಬಂಕಿಮಚಂದ್ರರ ಜೀವನ–ಸಾಹಿತ್ಯಗಳ ವಿಚಾರವಾಗಿ ಮಾತನಾಡಿದರು.

ಂ ಂ ಂ

ಯುರೋಪಿನ 15 ರಾಷ್ಟ್ರಗಳ ಕಮ್ಯೂನಿಸ್ಟ್ ಹಾಗೂ ಕಾರ್ಮಿಕ ಪಕ್ಷಗಳ ಸಮ್ಮೇಳನದಲ್ಲಾದ ಘೋಷಣೆಯ ಬಗ್ಗೆ ಟಿಪ್ಪಣಿ ಬರೆಯುತ್ತ ಫ್ರೆಂಚ್ ಕಮ್ಯೂನಿಸ್ಟ್ ಪಾರ್ಟಿಯ ದಿನಪತ್ರಿಕೆ 'ಲಾಉಮಾನಿತೆ'—ಕಾರ್ಮಿಕರ ಅಂತರ್ರಾಷ್ಟ್ರೀಯವಾದವನ್ನು ಹೆಚ್ಚು ಸಶಕ್ತವಾಗಿಸಲು, ಮತ್ತು ಕಮ್ಯೂನಿಸ್ಟ್ ಹಾಗೂ ಸೋಷಿಯಲಿಸ್ಟ್ ಪಕ್ಷಗಳ ಐಕ್ಯತೆಯ ಬೆಳವಣಿಗೆಗೆ ಕರೆಕೊಟ್ಟು ಶಾಂತಿಯ ಗಂಡಾಂತರವನ್ನು ತಪ್ಪಿಸಬೇಕೆಂದಿದೆ. ಈ ಹದಿನೈದು ಪಕ್ಷಗಳು ಪಶ್ಚಿಮ ಜರ್ಮನಿಯು ಸಾಮ್ರಾಜ್ಯಶಾಹಿಗಳ ಕೈಗೊಂಬೆಯಾಗಿ ಅಶಾಂತಿಗೆ ಕಾರಣವಾಗುತ್ತಿರುವುದನ್ನು ಖಂಡಿಸಿವೆ.

ಂ ಂ ಂ

ಪ್ರಪಂಚ ಇಂದು ಹೆಚ್ಚು ಹೆಚ್ಚಾಗಿ ಎಡಪಕ್ಷದತ್ತ ಒಲಿಯುತ್ತಿದೆಯೆಂದು ಇಂಡೋನೇಷ್ಯಾ ಕಮ್ಯೂನಿಸ್ಟ್ ಪಕ್ಷದ ದ್ವಿತೀಯ ಕಾರ್ಯದರ್ಶಿ ಜೋಟೋರವರು ಜಕಾರ್ತಾ ಸಮಿತಿಯ ಸಭೆಯಲ್ಲಿ ಹೇಳಿದರು. ಇಟಲಿ, ಫ್ರಾನ್ಸ್ ಮತ್ತು ಜಪಾನುಗಳಲ್ಲಿ ಇತ್ತೀಚಿಗೆ ಕಮ್ಯೂನಿಸ್ಟ್ ಪಕ್ಷಗಳು ಪಡೆದ ಮತಗಳೇ ಇದಕ್ಕೆ ಸಾಕ್ಷಿಯೆಂದೂ ಸೋವಿಯತ್ ರಷ್ಯದ ಸಾಧನೆಗಳು ಅಮೆರಿಕೆಗಿಂತ ಶ್ರೇಷ್ಠವಾಗಿದ್ದು ಬಂಡವಾಳಶಾಹಿ ವ್ಯವಸ್ಥೆಗಿಂತ ಸಮಾಜವಾದೀ ವ್ಯವಸ್ಥೆಯೇ ಶ್ರೇಷ್ಠವಾಗಿರುವುದೇ ಕಾರಣವೆಂದೂ ಹೇಳಿದ್ದಾರೆ.

ಂ ಂ ಂ

ದೆಹಲಿಯ ಭಾರತ—ಚೀನಾ ಮೈತ್ರಿ ಸಂಘದ ಆಶ್ರಯದಲ್ಲಿ 'ಪಂಚಶೀಲ'ದ ನಾಲ್ಕನೆಯ ವಾರ್ಷಿಕ ಜಯಂತಿಯನ್ನಾಚರಿಸಿ ಭಾರತ ಚೀನಾಗಳ ಸ್ನೇಹವನ್ನು ಪುನರುಚ್ಚರಿಸಲಾಯಿತಲ್ಲದೆ ಶಾಂತಿಯುತ ಸಹಜೀವನಕ್ಕಾಗಿ ಕರೆ ಕೊಡಲಾಯಿತು.

ಂ ಂ ಂ

ಅಮೇರಿಕೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ 533,000ದಿಂದ 5,437,000ಕ್ಕೆ ಏರಿರುವುದಾಗಿ ವರದಿಯಾಗಿದೆ. ಹದಿನೆಂಟು ತಿಂಗಳುಗಳಲ್ಲಿ ತಯಾರಿಕಾ ಕ್ಷೇತ್ರಗಳಲ್ಲಿ ಇದೀಗ ಕೊಂಚ ಉದ್ಯೋಗದ ಅವಕಾಶ ಹೆಚ್ಚಾಗಿದೆಯೆಂದೂ ಆ ವರದಿ ತಿಳಿಸುತ್ತದೆ.

ಸೋವಿಯೆತ್ ವಿಜ್ಞಾನಿಗಳ ಹೇಳಿಕೆ:

"ಗುರುತ್ವಾಕರ್ಷಣೆಗೆ ಮೀರಿದ ಹೊರ ವಾತಾವರಣಕ್ಕೆ ಸ್ಪೂತ್ನಿಕ್ ಪ್ರಯೋಗ ಸಾಧ್ಯ"

ಭೂಮಿಯ ಗುರುತ್ವಾಕರ್ಷಣೆಯ ವ್ಯಾಪ್ತಿಯನ್ನು ಮೀರಿದ ಹೊರವಾತಾವರಣಕ್ಕೆ ಸೂತ್ನಿಕ್ ಒಂದನ್ನು ಹಾರಿಸಬಲ್ಲ ವೈಜ್ಞಾನಿಕ ಸೌಲಭ್ಯ ರಷ್ಯದ ಬಳಿಯಿದೆಯೆಂದು ಸೋವಿಯೆತ್ ವಿಜ್ಞಾನಿಗಳು ಹೇಳಿದ್ದಾರೆ.

ಈಗ ಬಳಕೆಯಲ್ಲಿರುವ ರಚನಾ ತಂತ್ರ ಹಾಗೂ ಇಂಧನಗಳ ಸಹಾಯದಿಂದಲೇ ನೂತನ ಸ್ಪೂತ್ನಿಕನ್ನು ಪ್ರಯೋಗಿಸಲು ಸಾಧ್ಯವೆಂದೂ ಸೋವಿಯೆತ್ ವಿಜ್ಞಾನ ಮಂಡಲಿಯ ಸದಸ್ಯ ಎ. ಇಲ್ಯುಷಿನ್ ಮತ್ತು ಭೌತ-ರಸಾಯನ ವಿಜ್ಞಾನಗಳ ವಿ. ಲೆನ್‌ಸ್ಕಿಯವರು ಸರಕಾರದ ಪತ್ರಿಕೆ 'ಇಸ್ವೆಸ್ಟಿಯಾ'ದಲ್ಲಿ ಬರೆದಿದ್ದಾರೆ.

ನೂತನ ಸ್ಪೂತ್ನಿಕ್ ಬಾಹ್ಯಾಂತರಿಕ್ಷದ ವೇಗದ ಪರಿಮಿತಿಯಾದ ಸೆಕೆಂಡಿಗೆ ೧೧.೨ ಕಿಲೋಮೀಟರ್‌ಗಳ ವೇಗವನ್ನು ಮುರಿಯುವ ನಿರೀಕ್ಷೆಯಿದೆ. ಪ್ರಥಮ, ದ್ವಿತೀಯ ಹಾಗೂ ತೃತೀಯ ಸ್ಪೂತ್ನಿಕ್‌ಗಳು ಸಾಧಿಸಿದ ಅಂತರಿಕ್ಷ ಹಾರಾಟ ವೇಗದ ಪ್ರಮಾಣ ಸೆಕೆಂಡಿಗೆ ೮ ಕಿಲೋಮೀಟರ್‌ಗಳು.

ಭೂಮಿಯ ಗುರುತ್ವಾಕರ್ಷಣೆಯನ್ನು ಮೀರಿ ಹೊರಟುಹೋದ ನಂತರ ಸ್ಪೂತ್ನಿಕ್ ಅನಿರ್ದಿಷ್ಟಕಾಲದ ವರೆಗೆ ಪ್ರದಕ್ಷಿಣೆ ಮಾಡುತ್ತಿದ್ದು ಚಂದ್ರ ಇಲ್ಲವೆ ಮತ್ತಿನ್ನಾವುದಾದರೊಂದು ಗ್ರಹದ ಪಥಕ್ಕೆ ಎಳೆದುಕೊಳ್ಳಲ್ಪಡಬಹುದು ಎಂದು ಊಹಿಸಲಾಗಿದೆ.

ಉಪಗ್ರಹದ ಬಣ್ಣವು ಏಕೆ ಬದಲಾಯಿಸುತ್ತದೆ ?

ಸೋವಿಯೆತ್ ಸ್ಪೂತ್ನಿಕ್ ಕತೆ — ೩

ಲೆನಿನ್‌ಗ್ರಾಡ್ ನೌಕಾ ಕಾಲೇಜಿನ ಪ್ರೊಫೆಸರ್ ಎ. ಜಮೋರ್‌ಸ್ಕಿ, ಡಿ.ಎಸ್ಸಿ., ವಾತಾವರಣ ಶಾಸ್ತ್ರಾಚಾರ್ಯ ಅವರು ಉಪಗ್ರಹವು ಬಣ್ಣ ಬದಲಾಯಿಸುವುದರ ಬಗ್ಗೆ ಈ ಲೇಖನದಲ್ಲಿ ವಿವರಿಸಿದ್ದಾರೆ.

ಉಪಗ್ರಹವನ್ನು ಬರಿಗಣ್ಣಿನಿಂದ ನೋಡುವಾಗ, ವಾತಾವರಣ ದೃಶ್ಯಾಸ್ತ್ರಕ್ಕೆ ಅತ್ಯಂತ ಮಹತ್ವಪೂರ್ಣವಾದ, ಸ್ವಾರಸ್ಯಕರವಾದ, ವಾತಾವರಣ ಶಾಸ್ತ್ರೀಯ ವಾಸ್ತವಾಂಶಗಳನ್ನು ಪಡೆಯಲು ಸಾಧ್ಯವಿದೆ.

ರಾತ್ರೆಯ ಹೊತ್ತು 'ಸ್ಪೂತ್ನಿಕ್' ಅಷ್ಟೇಕೆ ಹೊಳೆಯುತ್ತದೆಂದು ಅನೇಕ ವೇಳೆ ಕೇಳಲಾಗುತ್ತದೆ. ಅದರ ಬಣ್ಣವು ಏಕೆ ಬದಲಾಯಿಸುತ್ತದೆ ? ಹಲವು ವೇಳೆ ಅದು ಹಳದಿಯ ಬಣ್ಣದ್ದಾಗಿಯೂ, ಒಮ್ಮೊಮ್ಮೆ ಕೆಂಪು ಬಣ್ಣದ್ದಾಗಿಯೂ ಕಂಡುಬರುತ್ತದೆ. ಒಮ್ಮೊಮ್ಮೆ ಉಪಗ್ರಹವು ಮಸಕಕಾಗಿಯೂ, ಪುನಃ ಹೊಳಪಾಗಿಯೂ ಏಕೆ ಕಾಣುತ್ತದೆ ?—ಎಂದು ಅನೇಕರು ಪ್ರಶ್ನಿಸುತ್ತಾರೆ.

ಭೂಮಿಯ ವಾತಾವರಣದಲ್ಲಿ ಹಾಯುವ ಸೂರ್ಯಕಿರಣಗಳ ವೈಚಿತ್ರ್ಯಗಳನ್ನು ನೆನಪಿಗೆ ತಂದುಕೊಳ್ಳೋಣ. ಭೂಮಿಯ ಮೇಲೆ ಬೀಳುವ ಸೂರ್ಯ ಕಿರಣಗಳು ಭೂಮಿಯ ಒಂದು ಭಾಗಕ್ಕೆ ಮಾತ್ರ ಬೆಳಕು ನೀಡುತ್ತವೆ. ಭೂಮಿಯ ಮೇಲ್ಮೈ ಮೇಲಿನ ಸೂರ್ಯಕಿರಣ ಪ್ರಕಾಶದ ಹಿತಭಾಗವನ್ನು ಅಪ್ರಕಾಶಾಂತ ರೇಖೆಯ [ಟರ್ಮಿನೇಟರ್] ಪ್ರಕಾಶವಿರುವ ಭಾಗದಿಂದ ಬೇರೆ ಮಾಡುತ್ತದೆ. ಮಧ್ಯರೇಖೆಯಾಗಿರುವ ಈ ಪ್ರಕಾಶಾಂತ ರೇಖೆಯನ್ನು ತಲಪುವ ಸೂರ್ಯಕಿರಣಗಳು ಅತ್ಯಂತ ಬಲಹೀನವಾಗಿದ್ದು, ನಸುಗೆಂಪು ಬಣ್ಣದಿಂದ, ಭೂಮಿಯ ಮೇಲ್ಮೈ ಕಡೆಗೆ ಬಾಗಿರುತ್ತವೆ.

ಏಕಕಾಲದಲ್ಲಿಯೇ ಒಂದು ಬಗೆಯ ಗಾಜಿನ 'ಲಸ್ತರು' [ಪ್ರಿಜಂ] ಆಗಿಯೂ ಮತ್ತು ಪ್ರಕಾಶ ಶೋಧಕವಾಗಿಯೂ ಕೆಲಸ ಮಾಡುತ್ತಿರುವ ವಾತಾವರಣದಿಂದ ಸೂರ್ಯಕಿರಣಗಳಲ್ಲಿ ಈ ಬದಲಾವಣೆಗಳುಂಟಾಗುತ್ತವೆ. ಔನ್ನತ್ಯವು ಹೆಚ್ಚಿದಂತೆ ವಾಯುವಿನ ಸಾಂದ್ರತೆಯು ತಗ್ಗುತ್ತದೆಯಾದ ಕಾರಣ, ಪ್ರಕಾಶಾಂತ ರೇಖೆಯ ಮೇಲಿನ ವಾತಾವರಣದ ಪ್ರಭಾವಕ್ಕೆ ಉನ್ನತ ಸೌರಕಿರಣಗಳು ಹೆಚ್ಚು ಸಿಕ್ಕುವುದಿಲ್ಲ. ಭೂಮಿಯಿಂದಾಚೆಗೆ ಮೊದಲನೆಯ ಮತ್ತು ಎರಡನೆಯ ಕಿಲೋಮೀಟರುಗಳ ದೂರದಲ್ಲಿ ಸೂರ್ಯಕಿರಣಗಳು ಕೆಂಪಾಗಿರುತ್ತವೆ. ಎರಡನೆಯದರಿಂದ ನಾಲ್ಕನೆಯ ಕಿಲೋಮೀಟರುಗಳ ವರೆಗೆ ಸೂರ್ಯಕಿರಣಗಳ ಬಣ್ಣವು ಹಳದಿಗೆಂಪಾಗಿಯೂ [ಆರೆಂಜ್], ನಾಲ್ಕನೆಯದರಿಂದ ಏಳನೆಯ ಕಿಲೋಮೀಟರಿನ ವರೆಗೆ ಹಳದಿಯಾಗಿಯೂ ಮತ್ತು ಇನ್ನೂ ಹೆಚ್ಚಿನ ಔನ್ನತ್ಯದಲ್ಲಿ ಬಿಳುಪಾಗಿಯೂ ಇರುತ್ತದೆ. ಆದರೂ ಕೂಡ 25 ಕಿಲೋಮೀಟರುಗಳ ಔನ್ನತ್ಯದಲ್ಲಿ ಕಡೆಯ ಮುಖ್ಯ ವರ್ಣ ವ್ಯತ್ಯಾಸವಾಗುತ್ತದೆ. ಇಲ್ಲಿ ಪ್ರಕಾಶಾಂತ ರೇಖೆಯ ಮೇಲೆ ಹಾಯುವ ಸೂರ್ಯ ಕಿರಣಗಳು ಹಸುರಾಗಿರುತ್ತವೆ. ಪ್ರಕಾಶವನ್ನು ಹೀರಿಕೊಳ್ಳುವ ಧೂಳಿನ ಪ್ರಭಾವದಿಂದ ಸಣ್ಣ ಔನತ್ಯದಲ್ಲಿ ಸೂರ್ಯ ಕಿರಣಗಳು ಕೆಂಪಾಗುತ್ತವೆಯಾದರೆ, ಪ್ರಕಾಶವನ್ನು ಹೀರಿಕೊಳ್ಳುವ 'ಓಜೋನ್' ಅನಿಲದ ಕಾರಣ [ಆಮ್ಲಜನಕದ ಬೇರೊಂದು ರೂಪ] ಉನ್ನತ ವಾತಾವರಣದಲ್ಲಿ ಸೂರ್ಯ ಕಿರಣಗಳು ಹಸುರಾಗುತ್ತವೆ

ಉಪಗ್ರಹವು ಪ್ರಕಾಶರಹಿತ ಪ್ರದೇಶದಿಂದ ಸೂರ್ಯ ಕಿರಣ ಪ್ರಕಾಶಿತ ಭಾಗಕ್ಕೆ ಬರುತ್ತಿರುವಾಗ, ಅದಕ್ಕೆ ಅನುಕ್ರಮವಾಗಿ ಮಸಕು ಕೆಂಬಣ್ಣದ, ಹೊಳೆವ ಹಳದಿಗೆಂಪಿನ ಮತ್ತು ಇನ್ನೂ ಪ್ರಕಾಶಮಯವಾದ ಹಳದಿ ಬಣ್ಣಗಳುಂಟಾಗುತ್ತವೆ. ಉನ್ನತ ಸೂರ್ಯ ಕಿರಣಗಳ ಮೇಲೆ ಹಾದುಹೋದಾಗ ಅದು ಬಿಳುಪಾಗಿ ಹೊಳೆಯುತ್ತದೆ. ಸ್ವಲ್ಪ ಹೊತ್ತಿನಲ್ಲೇ ಅದು ಹಸುರು ಪ್ರಕಾಶದಲ್ಲಿ ಹಾದುಹೋಗುತ್ತಾ—ನಕ್ಷತ್ರಗಳೂ ಮತ್ತು ಉಪಗ್ರಹವೂ ಕಾಣಿಸದಿರುವಷ್ಟು ಮಟ್ಟಿಗೆ ಆಕಾಶವು ಸಾಕಾದಷ್ಟು ಪ್ರಕಾಶ ಭರಿತವಾಗಿಲ್ಲದಿದ್ದರೆ,—ಹಸುರು ಬಣ್ಣವನ್ನು ಪಡೆಯುತ್ತದೆ.

ಸೂರ್ಯ ಕಿರಣಗಳು ಸ್ವತಂತ್ರವಾಗಿ ಪ್ರಕಾಶಾಂತ ರೇಖೆಯ ಮೇಲೆ ಹಾದುಹೋಗದಿರುವಂತೆಯೇ, ಉಪಗ್ರಹದ ವರ್ಣ ವ್ಯತ್ಯಾಸಗಳೂ ಸದಾ ಸಂಭವಿಸುವುದಿಲ್ಲ. ಮೋಡಗಳು ಕೆಲವು ವೇಳೆ ೮-೧೨ ಕಿಲೋಮೀಟರುಗಳ ಔನ್ನತ್ಯದಲ್ಲಿಯೂ, ಸಮಭಾಜಕ ವೃತ್ತದ ಮೇಲೆ ೧೭-೨೦ ಕಿಲೋಮೀಟರುಗಳ ಔನ್ನತ್ಯದಲ್ಲಿಯೂ ತೇಲುತ್ತಿರುತ್ತವೆ. ಇಂತಹ ಬಲಿಷ್ಠ ಮೋಡಗಳು, ಏಳು ಕಿಲೋಮೀಟರುಗಳ ವರೆಗಿನ ಔನ್ನತ್ಯದಲ್ಲಿ ಪ್ರಕಾಶಾಂತ ರೇಖೆಯ ಮೇಲೆ ಹಾಯುವ ಕೆಂಪು-ಹಳದಿ ಸೂರ್ಯ ಕಿರಣಗಳನ್ನು ಪೂರ್ಣತಃ ತಡೆಯುತ್ತವೆ.

ಉಪಗ್ರಹವು ಮೋಡಗಳ ನೆರಳಿನಲ್ಲಿ ಹಾದುಹೋಗುತ್ತಿರುವಾಗ ಬಿಳಿಯ ಮತ್ತು ಹಸಿರು ಬಣ್ಣಗಳಲ್ಲಿ ಮಾತ್ರವೇ ಕಂಡುಬರುತ್ತದೆ. ಹಾಗೆ ಕಾಣುವಾಗ ಅದು ಬಲು ಬೇಗನೆ ಮಸಕು ಮುಚ್ಚಿಹೋಗುತ್ತದೆ.

'ಸ್ಪೂತ್ನಿಕ್ಕಿ'ನ ವರ್ಣವ್ಯತ್ಯಾಸಗಳೂ, ಅದು ಮಸಕುಗಟ್ಟುವ ಲಕ್ಷಣವೂ,—ಸಮೀಕ್ಷಕರಿಂದ ಅಪಾರ ದೂರದಲ್ಲಿರುವ ಮೋಡಗಳ ಸಮುದಾಯವನ್ನು ನಿರ್ಣಯಿಸಲು, ಹವಾಮಾನವನ್ನು ಮುಂಚಿತವಾಗಿಯೇ ಕಂಡುಹಿಡಿಯಲು, ಸಾಧ್ಯ ಮಾಡಿಕೊಡುತ್ತವೆ. ಉದಾಹರಣೆಗೆ ಹೇಳುವುದಾದರೆ, ಸಂಜೆಯ ಹೊತ್ತಿನಲ್ಲಿ ನಿಯಮಿತ ಕಾಲಕ್ಕೆ ಮೊದಲೇ ಉಪಗ್ರಹವು ಮಸಕಾಯಿತೆಂದರೆ, ಹವಾಮಾನವು ಹೆಚ್ಚು ಕೆಡುವುದೆಂಬುದಕ್ಕೆ ಅದು ಮುನ್ಸೂಚನೆ. ಈ ಕ್ಷೇತ್ರಗಳಲ್ಲಿ ಬಿರುಗಾಳಿಗಳು ಸಾಮಾನ್ಯತಃ ಪಶ್ಚಿಮದಿಂದ ಪೂರ್ವದ ಕಡೆಗೆ ಬೀಸುತ್ತವೆಯಾದುದರಿಂದ, ಈ ಸಾಮಾನ್ಯ ಔನ್ನತ್ಯಗಳಲ್ಲಿ ಹವೆ ಕೆಡುವುದರ ಸೂಚನೆ ಇದು.

ಆಕಾಶವು ಅತ್ಯಂತ ತಿಳಿಯಾಗಿರುವೆಡೆಗಳಲ್ಲಿ 'ಸ್ಪೂತ್ನಿಕ' ಸಮೀಕ್ಷೆಗಳು ವಾತಾವರಣ ಶಾಸ್ತ್ರಜ್ಞರಿಗೆ ತುಂಬಾ ಸ್ವಾರಸ್ಯಪೂರ್ಣವಾದ ಆಧಾರಾಂಶಗಳನ್ನು ಒದಗಿಸಬಲ್ಲುದು.

ಚುಟುಕ—ಚುರುಕು

ನಾಡವೀಳ್ಯದೆಲೆ

ನಾಡವೀಳ್ಯದೆಲೆಯಲ್ಲಿ ಬೆರೆಯಿಸುತ
ಕರಿಯ ಕಾಚು ಬೆಳ್ಳನ ಸುಣ್ಣ
ಜಗಿದೆ ಜಗಿಯುತಿರೆ
ಕಾಲಪುರುಷನದೊ
ತುಟಿಗೆ ಬರುತಲಿದೆ ಚೆಂಬಣ್ಣ.

ಕಾರಕೂನ

ಕೆಲಬಲಕೆ ಕಣ್‌ಚೆಲ್ಲಿ ಸೌಂದರ್ಯ
ಸವಿಯದಲೆ
ಕುದುರೆಯೊಲು ತುಳಿಯುತಿಹ
ನೇರ-ದಾರಿ
ಕುತ್ತಿಗೆಗೆ ಬಿದ್ದ ಬಂಡಿಯನೆಳೆ
ಯುವುದನುಳಿದು
ಅವನ ಬದುಕಿಗೆಯಿಲ್ಲ
ಬೇರಾವ ಗುರಿ-ನಿರಿ.

ಎಂ. ಅಕಬರ್ ಆಲಿ

ಹುರಿಗಾಳು

ಬೆಳಗಾಂವಿಯ ಮುನಿಸಿಪಲ್ ಕಛೇರಿಯ ಮೇಲೆ ಭಗವಾ ಝುಂಡಾ ಹಾರಿಸಲ್ಪಡಬೇಕೆಂಬ ನಿರ್ಣಯ ಸ್ವೀಕಾರವಾಗಿದೆಯಂತೆ.

ಪ್ರತ್ಯೇಕ ಮರಾಠಾ ಹಿಂದೂ ರಾಜ್ಯವನ್ನು ಕಟ್ಟುವ ಬಗ್ಗೆ ಇದರಲ್ಲೇನೂ ಅಷ್ಟು ಸ್ಪಷ್ಟ ಲಕ್ಷಣಗಳು ಕಂಡಿಲ್ಲವಾದುದರಿಂದಲೋ ಏನೋ ಈ ವಿಚಾರ ಜತ್ತಿಯವರಿಗೆ ತಿಳಿಸಿದಾಗ ಮಾಮೂಲು ರೀತ್ಯಾ "ನೋಡೋಣ" ಎಂದರಂತೆ.

೦ ೦ ೦

"ಭೂಸುಧಾರಣೆಗಳ ಬಗ್ಗೆ ಪರಿಶೀಲನೆ ನಡೆಸಿ ಶಿಫಾರಸು ಮಾಡಲು ಮೈಸೂರು ಸರಕಾರ ಸಧ್ಯದಲ್ಲೇ ಕಮಿಷನ್ ಒಂದನ್ನು ರಚಿಸಲಾಗುವುದು. ಆ ಶಿಫಾರಸುಗಳ ಮೇಲೆ ಸರ್ಕಾರ ಶಾಸನವನ್ನು ರಚಿಸುವುದು" (ಮುಂಬೈಯಲ್ಲಿ ಶ್ರೀ ಜತ್ತಿಯವರ ಭಾಷಣ) ಇದು ತಪ್ಪು.

"ಆಖೈರಾಗಿ ತೀರ್ಮಾನಿಸುವ ಭೂಸುಧಾರಣೆಗಳನ್ನು ಕಾರ್ಯರೂಪಕ್ಕೆ ಇಳಿಸುವ ಜವಾಬ್ದಾರಿಯನ್ನು ನಿರ್ವಹಿಸಲು ಭೂ ಕಮಿಷನ್ ಒಂದನ್ನು ರಚಿಸಬೇಕೆಂಬುದು ಜತ್ತಿ ಸಮಿತಿಯ ಪ್ರಮುಖ ಸಿಫಾರಸುಗಳಲ್ಲಿ ಒಂದಾಗಿದೆ" ಇದು ಸರಿಯಾದುದು.

ಎಂದು ಮುಖ್ಯ ಮಂತ್ರಿ ಶ್ರೀ ಜತ್ತಿಯವರು ತಮ್ಮ ಬೊಂಬಾಯಿ ಭಾಷಣದ 'ತಪ್ಪಿನ' ಬಗ್ಗೆ ಬೆಂಗಳೂರಿಗೆ ಬಂದ ಬಳಿಕ ತಿಳುಹಿಸಿದರು.

ಭೂಸುಧಾರಣೆಗಳನ್ನು ಜಾರಿಗೆ ತರುವದರಲ್ಲಿ ಹೇಗೂ ಕಾಲ ತಳ್ಳಲು 'ಕಮಿಷನ್' ವ್ಯವಹಾರವಾಗಿದೆ ಎಂಬುದು ಮಾತ್ರ ನಿಜ. ಇಷ್ಟೇ ತಾನೆ, ಎಂದು ಬಡಬೋರೆ ಗೌಡರೊಬ್ಬರ ಪ್ರತಿಕ್ರಿಯೆ.

೦ ೦ ೦

ಎ. ಐ. ಸಿ. ಸಿ.ಯ ಮುಖಪತ್ರವಾದ 'ಎಕಾನಾಮಿಕ್ ರಿವ್ಯೂ' ಪತ್ರಿಕೆಯಲ್ಲಿ ಶ್ರೀಮನ್ನಾರಾಯಣರು *Ends and Means* ಎಂಬ ಶೀರ್ಷಿಕೆಯಲ್ಲಿ ಲೇಖನ ಬರೆಯುತ್ತ "ಸಾಧನೆಗಳು, ಸಿದ್ಧಿಗಳೆರಡೂ ಶುದ್ಧವಾಗಿರಬೇಕು. ಇದೇ ನಿಜವಾದ ಭಾರತೀಯ ಪರಂಪರೆ" ಎಂದು ಭಾರತದ ರಾಜಕೀಯ ಪಕ್ಷಗಳಿಗೆಲ್ಲ ಬೋಧಿಸಿದ್ದಾರೆ: "ದೇಶದ ಒಳಗೆ ನಡೆದಿರುವ ಕಾನೂನು ಬದ್ಧ ರಾಜಕೀಯ ಚಟುವಟಿಕೆಗಳಲ್ಲೂ ಕೂಡ ಆಳುವ ಪಕ್ಷವು ಹಿಂಸೆಯನ್ನು ಬಳಸಕೂಡದು. ಗೋಳಿಬಾರು ನಡೆದರೆ ತಕ್ಷಣವೇ ನ್ಯಾಯಾಂಗದ ರೀತ್ಯಾ ವಿಚಾರಣೆ ನಡೆಯಬೇಕು".

ಕೊಲೆ ಮಾಡಿದ ಬಳಿಕವೇ ಖಡ್ಗದ ರಕ್ತವನ್ನು ತೊಳೆದು ಆ ಸಲಕರಣೆಯನ್ನು ಶುದ್ಧಗೊಳಿಸ.ತ್ತೀರೆಂಬ ಸಮಾಧಾನ ನ

ಮಗಿದ್ದರೂ '
ಗೊಳಿಸುತ್ತೀರೆ

೦

ಮಚರಾಸಿನ
ಗ್ರಾಮಪಂಚಾ
ದಿವೆ. 50ಕ್ಕಿಂ
ಯತುಗಳಲ್ಲಿ ಈ
ಮೇದುವಾರರು
ಚುನಾಯಿಸಲ್ಪ
ಬೇರೆ ಜಿಲ್ಲೆಗ
ಕ್ಷವು ಗಮನಾಹ
ದೆ—ಸುದ್ದಿ.
ಬಂಗಾಲ ಆ
ಅಧಿಕಾರಕ್ಕೆ ಬ
ವಾಗಿ ಮದಂ
ಡಿನ ಬುಡದಿಂ
ಳಿತ ವ್ಯವಸ್ಥೆ
ಬರುವದೆಂಬು
ಯೇ ?

೦

'ಶೃಂಗ ಸವ
ಸಾಧ್ಯವೇ ಇಲ್ಲದ
ದೊಡ್ಡಿ ದೆಯೆಂದ
ಬುದಾಗಿ ಬ್ರಿಟ
ಕ್‌ಮಿಲನ್ ಕಾ
ಉತ್ತರಿಸಿದರಂತೆ
ಹಂಗೇರಿಯ
ನಾಜ್ ಶಿಕ್ಷೆಯ
ಡು ಅಮೇರಿಕೆ
ದಂಥ ಪರಿಸ್ಥಿ
ದು ಮ್ಯಾಕ್ಮಿಲ
ವಿಸುವರೋ
ದು ಪ್ರಶ್ನೆ.

೦

★ ಷರ್ಮ
ಧ್ಯಕ್ಷ ಐಸೆನ್ ಹ
ಹಾಯಕರಾದರ
stant) ಸಹ
President)
ಚ್ಚು. (ನಿಕ್ಸನ್ನ
ಮೇಲೆ ಲಂಚಗ
ಗಳು ಮಾಡಲ್ಪ
★ ಗೋ
ದ 24,000 ಡಾ
ಖಾನೆಗಳನ್ನು
ಫಿನ್ 700 ಡಾ
ಕೋಟೊಂದನ್ನು
ಅದಮ್‌ರವರ
ಡಾಲರುಗಳನ್ನು
ಇದೆಲ್ಲದರ ಉದ
ಬೇರ ವ್ಯವಹಾ
ಗೊಂದಲಗಳನ
1946ರ ವ
ಯಲ್ಲಿರುವವರ
ದರೆ ಅಧಿಕಾರದ
ಹೇಳಿದ ಐಸೆನ್
ಗತವಾಗಿ ನಾನ
ರನ್ನು) ಪ್ರೀತಿ
ಗೂ ಹೊರಗೂ
ಚಕ್ಕತೆಯನ್ನು
ಅನರು ನನಗೆ
ಭಾರತದಲ್ಲಿ
ರು ಮತ್ತು
ಕೋ.ರವರು
ಪ್ರಭುತ್ವ ಭಾ
ಅಲ್ಲ, ಯಾವ
ದಾಗಿ ಆಶಯ
ಖಚಿತವಾಗಿ

— ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಚದುರಂಗದಾಟದಲ್ಲಿ —

ಏಶಿಯದ ಜನರನ್ನು ಪ್ಯಾದೆಗಳನ್ನಾಗಿಸಬೇಡಿ

"ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಆಟದಲ್ಲಿ ಏಶಿಯದ ಜನರನ್ನು ಪ್ಯಾದೆಗಳನ್ನಾಗಿಸಬೇಡಿ" ಎಂಬ ಎದೆಕರಗುವ ಮಾತಿನಿಂದ ಇಂಡೋನೇಶಿಯದ ಅಧ್ಯಕ್ಷ ಸುಕರ್ಣೋರವರು ಬರೆದಿರುವ ಪತ್ರವೊಂದನ್ನು "ನ್ಯೂ ಸ್ಟೇಟ್ಸ್‌ಮನ್" ಪತ್ರಿಕೆ ಪ್ರಕಟಿಸಿದೆ.

"ಯುದ್ಧಕಾಲದಲ್ಲಿ ಅಣುಬಾಂಬಿಗೆ ಆಹುತಿಯಾದವರು ಏಶಿಯದವರೇ. ಇಂದಿನ ಶಾಂತಿ ಕಾಲದಲ್ಲೂ ಜಲಜನಕ ಬಾಂಬುಗಳ ಪರೀಕ್ಷೆಗೆ ತುತ್ತಾಗುತ್ತಿರುವವರೂ ಏಶಿಯದವರೇ ಎಂಬುದು ವೈಜ್ಞಾನಿಕವಾಗಿ ಸೂಚಿತವಾಗಿದೆ. ಏಶಿಯದ ಜನರ ಧ್ವನಿ ಈಗ ಕೇಳಲೇ ಬೇಕಾದ ಕಾಲ ಬಂದಿದೆ. ಜೀವನ ಅಥವ-ನ್ಯೂಕ್ಲಿಯರ್ ಸಾವು ಇವೆರಡರಲ್ಲೊಂದನ್ನು ಆಯ್ದುಕೊಳ್ಳುವುದು ನಮ್ಮ ಕೈಯಲ್ಲಿಲ್ಲದಿರುವುದು ನಿಜವಾದರೂ ಈ ವಿಷಯವಾಗಿ ಮಾತನಾಡುವ ಮತ್ತು ಪ್ರತಿಭಟಿಸುವ ಹಕ್ಕು ನಮಗಿದೆ. ಅಪಾಯಕ್ಕೊಳಗಾಗುವ ನಮ್ಮ ಭವಿಷತ್ತು ನಿಮ್ಮದಕ್ಕಿಂತೇನು ಕಡಮೆಯಾಗಿಲ್ಲ." ಎಂದು ಸುಕರ್ಣೋರವರು ಬರೆದಿದ್ದಾರೆ.

ಅವರ ಕಾಗದದ ಪೂರ್ತಿ ಪಾಠದ ಮುಖ್ಯಾಂಶಗಳು ಹೀಗಿವೆ:

"ಮನುಷ್ಯನಾಗಿ, ತಂದೆಯಾಗಿ, ಏಶಿಯದವನೊಬ್ಬನಾಗಿ, ಕೊನೆಗೆ ದೇವರು ಸೃಷ್ಟಿಸಿದ ಮಾನವ ಪ್ರಾಣಿಯಾಗಿ ಅಣು ಶಸ್ತ್ರಾಸ್ತ್ರಗಳ ಪರೀಕ್ಷೆಯಲ್ಲಿ ತೊಡಗಿರುವವರ ಮಾನವ ದ್ವೇಷ ಸದೃಶವಾದ 'ಸಿನಿಕ'ತನವನ್ನು ಕಂಡು ನಾನು ಭೀತನಾಗಿದ್ದೇನೆ.

"ಈಗಿನ ಪರಿಸ್ಥಿತಿಯಲ್ಲಿ ನಾವು ಏಶಿಯದವರು ಕ್ಷುದ್ರರಷ್ಟೆ ಅಲ್ಲ, ಈ ಆಟದಲ್ಲಿಯ ಪ್ಯಾದೆಗಳಾಗಿದ್ದೇವೆ. ನಮ್ಮ ಬಳಿಯಲ್ಲಿ ಅಣು ಅಸ್ತ್ರಗಳಿಲ್ಲ. ಇದಕ್ಕೆ ನಾವು ಕೃತಜ್ಞರೇ ಆಗಿರಬೇಕು. ಆದರೆ ಏನೇ ಇರಲಿ, ಏಶಿಯದ ಜನರ ಅಭಿಪ್ರಾಯವನ್ನು ಕಡೆಗಣಿಸುವುದು ಜಾಣತನದ ಕೆಲಸವಲ್ಲ. ನಾನು ಅತ್ಯಂತ ಪ್ರಾಮಾಣಿಕವಾಗಿ ಶುದ್ಧಾಂತಃಕರಣದಿಂದ ಹೇಳುತ್ತೇನೆ: ಈಗಿನ ಪರಿಸ್ಥಿತಿಯಿಂದ ನಾವು ತುಂಬಾ ಅಸಮಾಧಾನ ಚಿತ್ತರಾಗುತ್ತಿದ್ದೇವೆ. ಪಾಶ್ಚಿಮಾತ್ಯರ ಸೋಲು ಹಾಗೂ ನೈತಿಕ ದಿವಾಳಿಕೋರತನಕ್ಕೆ ಏಶಿಯದವರು ಪ್ರಮುಖ ಬಲಿಗಳಾಗಿದ್ದಾರೆ.

"ಪಶ್ಚಿಮವು ನೈತಿಕ ಗೊಂದಲವನ್ನು ತೀವ್ರವಾಗಿ ಎದುರಿಸುತ್ತಿದೆ. ಮುಂದೇನಾದರೂ ಮಾನವ ಪೀಳಿಗೆ ಇದ್ದರೆ ೨೦ನೇ ಶತಮಾನದ ಈ ಕೊನೆಯ ಅರ್ಧ ಭಾಗದ ಬಗ್ಗೆ ಅವರೇನು ತೀರ್ಪು ಕೊಟ್ಟಾರು? ಭಯಂಕರವಾದ ಈ ಶಸ್ತ್ರಾಸ್ತ್ರಗಳ ಪ್ರಯೋಗ ಪರೀಕ್ಷೆಯ ಪರಿಣಾಮ ನೂರಾರು ಸಹಸ್ರಾರು ಜನರ ಮೇಲೆ-ಹುಟ್ಟುವ ಹಾಗೂ ಇನ್ನೂ ಹುಟ್ಟದಿರುವ ಮಕ್ಕಳ ಮೇಲೆ ಆಗಿದೆಯೆನ್ನುವದರಲ್ಲಿ ಒಂದಿಷ್ಟೂ ಸಂದೇಹವಿಲ್ಲ. ಸರ್ವಶಕ್ತನೊಬ್ಬನಿಗೆ ಮಾತ್ರ ಸೇರಿದ್ದ ಶಕ್ತಿಗಳನ್ನೆಲ್ಲ ನೀವು ಹೊಂದಿರುವಿರಿ, ಪಿತೃಗಳ ಪಾಪ—ನಿಮ್ಮ ಪಾಪ—ಮಕ್ಕಳ ಮೇಲೆ ತಟ್ಟುತ್ತದೆ. ಈ ಸಂದರ್ಭದಲ್ಲಿ ನೀವು ಇದನ್ನು ನಂಬಿರಿ, ನಾವು, ಏಶಿಯದವರು ನಿಮ್ಮನ್ನು ನಾಗರಿಕತೆಯ ಶಿಕ್ಷಕರೆಂದಾಗಲಿ, ಭವಿಷತ್ತಿನ ಮುಂದಾಳುಗಳೆಂದಾಗಲಿ ಕಾಣುವುದಿಲ್ಲ, ನೀವು ಮೃತ್ಯುದೂತರು, ಹೌದು ನಮ್ಮ ಸಾವಿನ ದೂತರು ನೀವು.

"ಇಂಡೋಷ್ಯಾದಲ್ಲಿ ನಡೆದಿರುವ ಜಲಜನಕ ಬಾಂಬು ವಿರೋಧೀ ಸಪ್ತಾಹಾಚರಣೆಯ ಕಾಲದಲ್ಲಿ ನಾನು ಈ ಕಾಗದವನ್ನು ಬರೆಯುತ್ತಿದ್ದೇನೆ. ನನ್ನ ಸರಕಾರಿ ಕಛೇರಿಯ ಆವರಣದಲ್ಲಿ ಸಹಸ್ರಾರು ಜನರು ಸೇರುತ್ತಿದ್ದಾರೆ. ಅವರು ಕಮ್ಯೂನಿಸ್ಟರು ಅಥವಾ ಕಮ್ಯೂನಿಸ್ಟ್ ಹಿಂಬಾಲಕರು ಎಂದು ಭಾವಿಸಬೇಡಿ. ಅವರು ಕೇವಲ ಸಾಮಾನ್ಯ ಮನುಷ್ಯರು, ತಮ್ಮ ಭವಿತವ್ಯದ ಬಗ್ಗೆ ಚಿಂತಾಕ್ರಾಂತರಾದವರು, ಚಕಿತರಾಗಿ ನಿಂತವರು. ತಮ್ಮ ಸಾಚಾ ಜೀವನ ದುರಂತದಲ್ಲಿ ಕೊನೆಗಾಣಲಿಕ್ಕಿಲ್ಲ ಎಂದು ಆಶಿಸಿದವರು. ಅವರು, ತಾವು ಮಾಡಿಲ್ಲ ತಪ್ಪಿನಿಂದ ತಮ್ಮ ಆಶೆಗಳೆಲ್ಲ ನಾಶವಾದುವು ಎಂದು ತಿಳಿದಿಲ್ಲ. ಇದನ್ನು ನಡೆಸುವ ಯಾರೋ ದೂರದವರಿಗೆ ಅವರು ತೆರಬೇಕಾದುದೂ ಏನಿಲ್ಲ. ಎನಿವೆಟಾಕ್‌ನಲ್ಲಿ ನಡೆದ ಜಲಜನಕ ಬಾಂಬುಗಳ ಪ್ರಯೋಗದ ಸರಮಾಲೆಗೆ ಸಂಬಂಧಿಸಿ ಈ ಸಭೆ ನಡೆಯುತ್ತಿದೆ, ಈ ಪ್ರಯೋಗಗಳು ನಮ್ಮ ಹಿತ್ತಲಲ್ಲೇ ನಡೆಯುತ್ತಿರುವ ಬಗ್ಗೆ ಅವರಿಲ್ಲಿ ಸೇರಿದ್ದಾರೆ. ಇದರ ಪರಿಣಾಮವಾಗಿ ಎಷ್ಟು ಜನ ಏಶಿಯದವರು ಸಾಯುತ್ತಾರೆ ಎಂಬುದನ್ನು ವಿಜ್ಞಾನಿಗಳು ಹೇಳಬಲ್ಲರೇ? ನೈತಿಕ ಕಾನೂನಿನ ಸೂತ್ರಗಳು ಇದನ್ನು ಪ್ರತಿಭಟಿಸಲು ನಮ್ಮನ್ನು ಒತ್ತಾಯಪಡಿಸಿವೆ!

ಡಾ|| ಸುಕರ್ಣೋ

''ಮೂರು ವರುಷಗಳ ಹಿಂದೆ ನಿರಾಯುಧೀಕರಣವೂ, ಮತ್ತು ನ್ಯೂಕ್ಲಿಯರ್ ಯುದ್ಧಾಸ್ತ್ರಗಳ ಪ್ರಯೋಗ ಮತ್ತು ಬಳಕೆಯ ಬಹಿಷ್ಕಾರವೂ, ಒಟ್ಟುಗಟ್ಟಲೆ ವಿನಾಶದ ಭೀತಿಯಿಂದಲೂ ಮಾನವ ಕುಲವನ್ನು ಮತ್ತು ನಾಗರಿಕತೆಯನ್ನು ಉಳಿಸಲು ಅಗತ್ಯವಾಗಿದೆ" ಎಂದು ಬಾಂಡುಂಗ್ ಸಮ್ಮೇಲನವು ಅಭಿಪ್ರಾಯಪಟ್ಟಿತು.

"ಏಶಿಯದ ರಾಜ್ಯಗಳ ಪುನರ್ರಚನೆಗೆ ಶಾಂತಿಯ ದೃಢವಾದ ಆಶ್ವಾಸನೆ ಬೇಕೆನ್ನುವದನ್ನು ನಾವು ಇನ್ನೂ ನಂಬುತ್ತೇವೆ. ಪ್ರಪಂಚದ ಮೇಲೆ ಬಲವಂತದಿಂದ ನಾವು ಶಾಂತಿಯನ್ನು ಹೇರಲಾರೆವು. ಆದರೆ ನಮ್ಮ ಹಕ್ಕು ಕೇಳಲ್ಪಡಬೇಕು, ಪರಾಮರಿಸಲ್ಪಡಬೇಕು ಎಂದು ಕೇಳುತ್ತೇವೆ. ನ್ಯೂಕ್ಲಿಯರ್ ಅಸ್ತ್ರಗಳ ತಯಾರಿಕೆಯ ಪೂರ್ಣ ನಿಷೇಧವಾಗುವವರೆಗೂ ಮತ್ತು ಇಂಥ ಅಸ್ತ್ರ ಪ್ರಯೋಗವನ್ನು ತಾತ್ಕಾಲಿಕವಾಗಿಯಾದರೂ ತಡೆಹಿಡಿಯಲು ಒಪ್ಪಿಕೊಳ್ಳಬೇಕು ಎಂದೂ ಬಾಂಡುಂಗ್ ಸಮ್ಮೇಲನ ಇನ್ನೂ ಮುಂದೆ ಕೇಳಿಕೊಂಡಿತ್ತು. ಆದರೆ ಮೂರು ವರುಷಗಳ ಬಳಿಕ ಒಂದೇ ಒಂದು ರಾಷ್ಟ್ರವು ಮಾತ್ರ ಹಾಗೆ ಮಾಡಿದೆ. ಇತರ ರಾಷ್ಟ್ರಶಕ್ತಿಗಳು ಕೈಗೊಳ್ಳುವ ಇಂತಹ ಇನ್ನಾವ ಕಾರ್ಯಾಚರಣೆಯನ್ನೂ ನಾವು ಸ್ವಾಗತಿಸುವಂತೆ ಇದನ್ನೂ ನಾವು ಸ್ವಾಗತಿಸಿದ್ದೇವೆ.

"ಕಮ್ಯೂನಿಸ್ಟ್ ಮತ್ತು ಕಮ್ಯೂನಿಸ್ಟ್ ವಿರೋಧಿ ಗುಂಪುಗಳೆರಡೂ ಈ ಸಮಸ್ಯೆಯನ್ನು ಬಿಡಿಸದಿದ್ದರೆ ಪಾಶ್ಚಿಮಾತ್ಯ ನಾಗರಿಕತೆ ನಾಶವಾಗುವದಕ್ಕೆ ಅರ್ಹವಾಗಿದೆ. ಇದು ಕೇವಲ ರಕ್ಷಣೆಯ ಸಮಸ್ಯೆಯಲ್ಲ, ನೀತಿಯ, ವ್ಯಕ್ತಿಯ ಹಾಗೂ ಅಂತರ್‌ರಾಷ್ಟ್ರೀಯ ಸಮಸ್ಯೆಯಾಗಿದೆ ಎಂಬುದನ್ನು ಈಗ ತಿಳಿದುಕೊಳ್ಳಬೇಕು.

"ನಮ್ಮನ್ನು ಗಂಡಾಂತರಕ್ಕೆ ತಳ್ಳುತ್ತಿರುವ, ನಮ್ಮ ಭವಿಷ್ಯವನ್ನು ಹಾಳು ಮಾಡುವದರ ಮುಂದುವರಿಕೆಯನ್ನು ನಡೆಸಿರುವ ಪಶ್ಚಿಮದ ಹಕ್ಕನ್ನು ನಾವು ಕಟುವಾಗಿ ಅಲ್ಲಗಳೆಯುತ್ತೇವೆ. ನಮ್ಮ ಮಕ್ಕಳಿಗೆ ಕ್ಯಾನ್ಸರ್ ಕಾಹಿಲೆಯನ್ನುಂಟ್ಟುಸುವ ನಿಮ್ಮ ಹಕ್ಕನ್ನು ನಾವು ಕಟುವಾಗಿ ಅಲ್ಲಗಳೆಯುತ್ತೇವೆ.....

"....ಇದೀಗ ನೀವೆಲ್ಲ ಈ ನೈತಿಕ ದಿವಾಳಿಕೋರತನದಿಂದ ಹಿಂದಿರುಗ ಬೇಕಾಗಿದೆ.... ನಿಮ್ಮ ಬುದ್ಧಿ ಚಾತುರ್ಯ, ಯಾಂತ್ರಿಕ ಕುಶಲತೆಯ ವಿಜ್ಞಾನಗಳು ಶಾಂತಿಯುತ ಸಾಧನೆಗಳಿಗೇ ಎಂಬುದನ್ನು ನೀವು ಇದೀಗ ಖಚಿತವಾಗಿ ತಿಳಿದುಕೊಳ್ಳಬೇಕಾಗಿದೆ.

"ಪಶ್ಚಿಮವು ಈಗ ಏಶಿಯಾಕ್ಕೆ ನೈತಿಕ ನಾಯಕತ್ವವನ್ನು ನೀಡುವ ಪ್ರಶ್ನೆಯೆ ಇಲ್ಲ. ನಮಗಂತೂ ನಿಮ್ಮ ನೈತಿಕ ನಾಯಕತ್ವವು ಮೊದಲಿಗೆ ವಸಹಾತುವಾದವೆಂದು ಅರ್ಥವಾಗುತ್ತಿತ್ತು. ಈಗದು ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳ ಪೈಪೋಟಿಯ, ತಾತ್ವಿಕ, ನೈತಿಕ, ರಾಜಕೀಯ ಮತ್ತು ಸಾಮಾಜಿಕ ದಿವಾಳಿಕೋರತನವೆಂಬುದು ಅರ್ಥವಾಗುತ್ತಿದೆ.

"ಮರ್ಡೇಕಾ (ಸ್ವಾತಂತ್ರ) ಮಹಲಿನ ಸುತ್ತ ಸೇರಿರುವ ಈ ಸಾವಿರಾರು ಜನರು ರಾಜಕೀಯ ನಿಪುಣರಾಗಿರಲಿಕ್ಕಿಲ್ಲ, ಆದರೆ ಅವರು ಮೂರ್ಖರಲ್ಲ, ಅವರು ಎಚ್ಚರಾಗಿಗಿರುವ ಜನರು.

"ನೀವು, ಪಾಶ್ಚಿಮಾತ್ಯರು ಮಾನವತೆಯಲ್ಲಿಯ ಛಿದ್ರತೆಗೆ ಕಾರಣರಾಗುತ್ತಿದ್ದೀರಿ ಮತ್ತು ಮನುಷ್ಯನ ಮೆದುಳು ಮತ್ತು ಹೃದಯದಲ್ಲಿ ನಡೆದಿರುವ ತುಮುಲದಲ್ಲಿ ನೀವೆ ಸೋಲುತ್ತಿದ್ದೀರಿ".

o o o

ರೇಡಿಯೋ ಆಕ್ಟಿವ್

ದಕ್ಷಿಣ ಜಪಾನಿನಲ್ಲಿ ಇತೀಚೆಗೆ ಬಿದ್ದ ಮಳೆಯಲ್ಲಿ ರೇಡಿಯೋ ಆಕ್ಟಿವ್ ಕಣಗಳು ಈ ಸಲ ಹೆಚ್ಚು ಸಂಖ್ಯೆಯಲ್ಲಿ ದಾಖಲಾಗಿವೆ.

ಟೋಕಿಯೋದಲ್ಲಿರುವ ಕೇಂದ್ರ ವಾತಾವರಣ ಸಮೀಕ್ಷಾ ಸಂಸ್ಥೆಯು ತನ್ನ ವರದಿಯಲ್ಲಿ "ದಕ್ಷಿಣ ಜಪಾನದ ಕಾಗೋಶಿಮಾದ ಪ್ರದೇಶದಲ್ಲಿ ಮಳೆಯಲ್ಲಿ 17,381 ಎಣಿಕೆಯ ವರೆಗೂ ರೇಡಿಯೋ ಆಕ್ಟಿವ್ ಅನ್ನು ಪತ್ತೆ ಮಾಡಲಾಗಿದೆ" ಎಂದು ಹೇಳಿದೆಯಲ್ಲದೆ ಶಾಂತ ಸಾಗರದಲ್ಲಿ ಅಮೇರಿಕೆಯು ನಡೆಸಿದ ಪ್ರಯೋಗಗಳ ಫಲಿತಾಂಶವೇ ಇದು ಎಂದೂ ಹೇಳಿದೆ.

ಪ್ರಜಾಪ್ರಭುತ್ವದ ಮುನ್ನಡೆಯಲ್ಲಿ ಕೇರಳ

ನಿರ್ಲಕ್ಷಿತ ಬಾಲಕರ ರಕ್ಷಣೆ

ಕೇರಳ ಸರಕಾರವು ಮಕ್ಕಳಿಗೆ ಸಂಬಂಧಿಸಿದ ಮಸೂದೆಯೊಂದನ್ನು ಇಷ್ಟರಲ್ಲೇ ಮಂಡಿಸಲಿದೆ. ಈ ಮಸೂದೆಯ ಪ್ರಕಾರ ನಿರ್ಲಕ್ಷಿತ ಹಾಗೂ ಅಪರಾಧಿ ಬಾಲಕರ ಆರೈಕೆ, ರಕ್ಷಣೆ, ಶಿಕ್ಷಣ, ಪುನರ್ವವಸ್ಥೆಗಳಿಗೆ ವಿಶೇಷ ಗಮನ ಕೊಡಲಾಗುವುದು.

ಈ ಮಸೂದೆಯ ಪ್ರಕಾರ ಮಕ್ಕಳ ಮನೆಗಳು, ಮಕ್ಕಳ ವಿಹಾರ ಕೇಂದ್ರಗಳು, ಮಕ್ಕಳ ಆಸ್ಪತ್ರೆಗಳು ಸ್ಥಾಪಿಸಲ್ಪಡುವವು.

ಮಕ್ಕಳ ಮನೆಗಳಲ್ಲಿ ತಬ್ಬಲಿಯಾದ, ನಿರ್ಲಕ್ಷಿತ ಮಕ್ಕಳಿಗೆ ನಿವಾಸವನ್ನೂ ಆಹಾರ ವಿಹಾರದ ವ್ಯವಸ್ಥೆಯನ್ನೂ ಶಿಕ್ಷಣದ ಸೌಕರ್ಯಗಳನ್ನೂ ಕಲ್ಪಿಸಿಕೊಡಲಾಗುವುದು. ನೈತಿಕ ಅಪಾಯಗಳಿಂದ ಹಾಗೂ ಶೋಷಣೆಗಳಿಂದ ಸಂರಕ್ಷಿಸಿಕೊಳ್ಳಲು ಬಾಲಕರು ಸ್ವಯಂ ಸಮರ್ಥರಾಗುವಂತೆ ತರಬೇತುಗೊಳಿಸಲಾಗುವುದು. ಮಕ್ಕಳ ನ್ಯಾಯಾಲಯಗಳನ್ನೂ ಸ್ಥಾಪಿಸಲಾಗುವದಲ್ಲದೆ ನ್ಯಾಯಾಲಯಗಳಲ್ಲಿ ಮಕ್ಕಳು ಹೇಗೆ ನಡೆದುಕೊಳ್ಳಬೇಕು, ಮತ್ತಿನ್ನಿತರ ರೀತಿನೀತಿಗಳನ್ನು ಅವುಗಳಿಗೆ ಹೇಳಿಕೊಡಲಾಗುವುದು. ಅಪರಾಧೀ ಬಾಲಕರು ಮಕ್ಕಳ ಮನೆಗಳಿಂದ ತಮ್ಮ ಶಿಕ್ಷೆಯನ್ನು ಮುಗಿಸಿ ಹೊರಬಂದ ಬಳಿಕ ಅನಂತರದ ಸಂರಕ್ಷಣೆಗಾಗಿ ಇರುವ ವ್ಯವಸ್ಥೆ ಅವರು ಪ್ರಾಮಾಣಿಕರಾಗಿಯೂ ಉದ್ಯೋಗಶೀಲರಾಗಿಯೂ ಬೆಳೆಯುವಂತೆ ನೋಡಿಕೊಳ್ಳುವದಲ್ಲದೆ ಸಮಾಜಕ್ಕೆ ಪ್ರಯೋಜನಕಾರಿಯಾದ ಜೀವನವನ್ನು ಅವರು ಸಾಗಿಸುವಂತೆ ಸಿದ್ಧಗೊಳಿಸಲಾಗುವುದು.

ಪೋಲೀಸರಿಂದ ಭಾಷಣಗಳ ವರದಿ

''ರಾಜಕೀಯ ಪಕ್ಷಗಳ ಮುಖಂಡರುಗಳ ಭಾಷಣಗಳನ್ನು ಪೋಲೀಸ್ ವರದಿಗಳ ಮುಖೇನ ಪಡೆಯುವ ನೀತಿಯನ್ನು ಕಮ್ಯೂನಿಸ್ಟ್ ಸರಕಾರವು ಒಪ್ಪುವುದಿಲ್ಲ" ಎಂಬುದಾಗಿ ಕಾನೂನು ಸಚಿವ ಶ್ರೀ ಕೃಷ್ಣ ಐಯ್ಯರ್ ಅವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

[ಪ್ರತಿಪಕ್ಷಗಳ ಯಾವದೇ ಸಭೆ ನಡೆಯಲಿ, ವರದಿಯನ್ನು ಪೋಲೀಸರ ಮೂಲಕ ಪಡೆಯುವದು ಕಾಂಗ್ರೆಸ್ ರಾಜ್ಯಗಳಲ್ಲಿ ಬಹಿರಂಗವಾಗಿರುವ ಗುಟ್ಟಾಗಿದೆ.]

(ಆನೇ ಪುಟ ನೋಡಿ)

ನೀವೇನು ಹೇಳುತ್ತೀರಿ ?

ಟೀಕೆ ಅನಗತ್ಯ !

ಕಲ್ಕತ್ತಾ ಕ್ಲಬ್ ಲಿಮಿಟೆಡ್‌ನ ವಾರ್ಷಿಕ ವರದಿಯಲ್ಲಿಯ ಅಂಶವೊಂದು ಹೀಗಿದೆ:

"ಮದ್ಯ ಮತ್ತು ಸಿಗರೇಟುಗಳ ಲೆಕ್ಕವು ಈ ಸಲ ರೂ. ೧,೦೩,೭೪೬ ಹೆಚ್ಚಳವನ್ನು ತೋರಿಸುತ್ತದೆ. ಹಿಂದಿನ ವರುಷ ರೂ. ೮೦,೭೨೮ ಇದ್ದಿತು. ಕಾಫಿ ರೂಮಿನ ಲೆಕ್ಕ ರೂ. ೧೯,೩೯೮ ನಷ್ಟವನ್ನು ತೋರಿಸುತ್ತದೆ. ಹಿಂದಿನ ವರುಷ ರೂ. ೧,೯೦೫ ಲಾಭವನ್ನು ತೋರಿಸಿತ್ತು".

"ದಿ ಕಲ್ಕತ್ತಾ ಕ್ಲಬ್ ಲಿಮಿಟೆಡ್, ಪೋಷಕರು: ಡಾ|| ರಾಜೇಂದ್ರ ಪ್ರಸಾದ್, ಅಧ್ಯಕ್ಷರು, ಭಾರತ ಗಣರಾಜ್ಯ".

ನಿಜವಾಗ್ಲೂ ದೇಶದಲ್ಲಿ ಕಾಂಗ್ರೆಸ್ಸಿನ ಪರಿಸ್ಥಿತಿ ಹೇಗಿದೆ? ಪಂಜಾಬ್ ಉತ್ತರ ಪ್ರದೇಶಗಳಲ್ಲಂತೂ ಕಾಂಗ್ರೆಸ್ಸಿನ ಸ್ಥಿತಿ ತುಂಬಾ ಚಿಂತಾಜನಕವಾಗಿದೆ. ರಾಜಸ್ಥಾನದಲ್ಲೂ ಕಾಂಗ್ರೆಸ್ ಬಿರುಕುಬಿಟ್ಟು ತತ್ತರಿಸುತ್ತಿದೆ.

ಆಂಧ್ರ—ಬಂಗಾಲಗಳಲ್ಲಿ ಕಮ್ಯೂನಿಸ್ಟರು ಮುಂದಿನ ಸಲ ಅಧಿಕಾರಕ್ಕೆ ಬರುವರೆಂದು ಬೇರೆ ಹೇಳಲಾಯಿತು.

ಹಾಗಾದರೆ ಏನು ನಿಜವಾದ 'ಹಕೀಕತ್ತು?'

ಇತ್ತೀಚೆಗೆ ಉತ್ತರ ಪ್ರದೇಶದಲ್ಲಿ ಮಂಡಲ ಕಾಂಗ್ರೆಸ್ಸುಗಳ ಸಮ್ಮೇಲನವೊಂದನ್ನು ಕರೆಯಲಾಗಿತ್ತು. ಅಲ್ಲಿ 3,284 ಮಂಡಲಗಳಿವೆ, ಬಂದವುಗಳೆಷ್ಟು? ಸುಮಾರು ಒಂದೇ ಒಂದು ನೂರು ಮಂಡಲಗಳು ಸಭೆಗೆ ಆಗುಮಿಸಿದ್ದುವು.

ನಿಜವಾದ 'ಹಕೀಕತ್ತು' ಎಂದರೆ ಅಲ್ಲಿ ಮಂಡಲ ಕಾಂಗ್ರೆಸ್ಸುಗಳು ಇಷ್ಟು ಇಲ್ಲವೇ ಇಲ್ಲ, ಇದ್ದರೂ 'ನಾಮ್‌ಕಾವಾಸ್ತೆ'! ಅಂದರೆ ಆ ಮಟ್ಟದಲ್ಲಿ ಕಾಂಗ್ರೆಸ್ಸಿಗೆ ಏನೇನೂ ನಾಯಕತ್ವವೇ ಇಲ್ಲ.

ಈ ಸಭೆಗೆ ಸೇರಿದ ಕಾಂಗ್ರೆಸ್ಸಿಗರು ಏನು ಹೇಳಿದರು ಗೊತ್ತೆ?

"ಜನರ ತೊಂದರೆಗಳನ್ನು ನಿವಾರಿಸಲು ನಾವು ಅಸಮರ್ಥರಾಗಿದ್ದೇವೆ. ಅಂತೆಯೇ ಈ ಸ್ಥಿತಿ ಬಂದೊದಗಿದೆ".

ಇತ್ತೀಚೆಗೆ ಬಂಗಾಲ ಕಾಂಗ್ರೆಸ್ಸಿಗರು ಸಮ್ಮೇಲನವೊಂದನ್ನು ನಡೆಸಿದರು.. ಆರಂಭೋತ್ಸವ ಪಂಡಿತ ಪಂತರಿಂದ, ಅಧ್ಯಕ್ಷತೆ ಸದೋಬಾ (ಎಸ್. ಕೆ.) ಪಾಟೀಲರಿಂದ.

"ಅಧಿಕೃತವಾಗಿ 'ನಿಜವಲ್ಲ' ಎನ್ನುವ ವರೆಗೆ ಯಾವುದೂ ನಿಜವಲ್ಲ" [Nothing is true unless it is officilly contradicted] ಎಂಬುದೊಂದು ಇಂಗ್ಲೀಷಿನಲ್ಲಿ ಹೇಳುವ ಮಾತು. ಬಂಗಾಲ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು (ಕಮ್ಯೂನಿಸ್ಟರು ಅಧಿಕಾರಕ್ಕೆ ಬರುವುದು) "ಶುದ್ಧ ಅವಿವೇಕದ ಮಾತು" ಎಂದರು. ದೆಹಲಿಯಿಂದ ಧಾವಿಸಿದ ಪಂಡಿತ ಪಂತರು "ಯಾವದೇ ಸೋಲಿನ ಮನೋಭಾವದಿಂದ ಬಳಲಬೇಡಿ" ಎಂದು ಬಂಗಾಲ ಕಾಂಗ್ರೆಸ್ಸಿಗರಿಗೆ ಬೋಧಿಸಿದರು. ಪಾಟೀಲರು (ಬಂಗಾಲ ಕಾಂಗ್ರೆಸ್ಸಿಗರಿಗೆ) "ಸ್ವಯಂಹೀನಾಯ" ಅಥವಾ "ರಾಜಕೀಯ ನರವ್ಯಾಧಿಯ ನರಳಾಟ"ದ ಬಗ್ಗೆ ಎಚ್ಚರಿಕೆಯನ್ನಿತ್ತರು. ಕಾಂಗ್ರೆಸ್ ಅಲ್ಲಿ ತಳಕಿತ್ತುವದೆಂದು ದೆಹಲಿಯ ದೊರೆಗಳಿಗೂ ಈಗ ಭೀತಿಯಿದೆಯೆಂದಂತಾಗಲಿಲ್ಲವೇ? ಕಮ್ಯೂನಿಸ್ಟರ ಹೇಳಿಕೆಗಳಿಗೆ ಪ್ರತಿಯಾಗಿ ಈ ಕಾಂಗ್ರೆಸ್ ಧುರೀಣರು ಈಗ ಬಾಯಿ ಬಿಟ್ಟಿದ್ದಾರೆ. ಅಧಿಕೃತವಾಗಿ ಪ್ರತಿ ನುಡಿದಿದ್ದಾರೆ. ಹಾಗಾದರೆ......

ಕಾಂಗ್ರೆಸ್ಸು ಕಲಕತ್ತೆಯನ್ನಾಳಬಹುದೇ? ಅಸೆಂಬ್ಲಿಯಲ್ಲಿ ಕಲಕತ್ತೆಗಿರುವ ೨೬ ಸ್ಥಳಗಳಲ್ಲಿ ಕೇವಲ ೮ ಸ್ಥಳಗಳನ್ನು ಸಂಪಾದಿಸಿದೆ.

ಆಂಧ್ರದಲ್ಲಾದರೂ ಏನು?

ಆಂಧ್ರದಲ್ಲಿ ಆರು ಉಪಚುನಾವಣೆಗಳಲ್ಲಿ ಕಾಂಗ್ರೆಸ್ಸು ಐದು ಸ್ಥಳಗಳನ್ನು ಕಳೆದುಕೊಂಡಿದೆ. 43 ಜನ ಕಾಂಗ್ರೆಸ್ ಸದಸ್ಯರಿರುವ ಹೈದರಾಬಾದ ಮುನ್ಸಿಪಲ್ ಕಾರ್ಪೊರೇಷನ್ನಿನಲ್ಲಿ ಸ್ಥಾಯಿಾ ಸಮಿತಿಯಲ್ಲಿ ಅವರು ಒಟ್ಟು ಆರು ಸ್ಥಳಗಳಲ್ಲಿ ಒಂದನ್ನು ಸಂಪಾದಿಸಿದರು. ವಿರೋಧ ಪಕ್ಷದವರು 23 ಜನರಿದ್ದರೂ ಸ್ಥಾಯಿಾ ಸಮಿತಿಯಲ್ಲಿ 5 ಸ್ಥಳಗಳನ್ನು ಹಿಡಿದುಕೊಂಡರು.

ಹೀಗೆ ಆಂಧ್ರ ಮತ್ತು ಬಂಗಾಲಗಳಲ್ಲಿ ಕಾಂಗ್ರೆಸ್ ಅಧಿಕಾರದಿಂದ ಕಳಚುವ ಸ್ಥಿತಿಯಲ್ಲಿದ್ದರೆ ಕಾಂಗ್ರೆಸ್ಸಿನ ವ್ಯಾಧಿಯ ಬಗ್ಗೆ ಇಲ್ಲಿ ಇನ್ನೊಂದು ಬಗೆಯ ದೃಷ್ಟಾಂತಗಳು ಇವೆ.

★ ದೆಹಲಿಯ ಮುನ್ಸಿಪಲ್ ಚುನಾವಣೆಗಳಲ್ಲಿ ಜನಸಂಘವನ್ನು ಸೋಲಿಸಲು ಕಾಂಗ್ರೆಸ್ಸಿಗರು ಕಮ್ಯೂನಿಸ್ಟರೊಂದಿಗೆ ಸ್ನೇಹ ಬೆಳೆಸಿದರು.

★ ಪಿ. ಎಸ್. ಪಿ.ಯೇ ಹೆಚ್ಚಿನ ರಾಜ್ಯಗಳಲ್ಲಿ ಸಾಮಾನ್ಯವಾಗಿ ಕಾಂಗ್ರೆಸ್ಸಿಗೆ ವಿರೋ

(೯ನೇ ಪುಟ ನೋಡಿ)

ಭಾರತದಲ್ಲಿ ಕೂಮಿಂಗ್ ಟಾಂಗ್ ಏಜಂಟರು !

ಬಂಗಾಲ ಕಾಂಗ್ರೆಸಿಗರಿಂದ ಭಾರತದ ಅವಮಾನ

ಭಾರತ—ಚೀನಾ ಸ್ನೇಹಕ್ಕೆ ಅಪಚಾರ

ರಾಜಕೀಯದಲ್ಲೂ ಸೃಷ್ಟಿ ವೈಚಿತ್ರಗಳು ನಡೆಯುತ್ತವೆಯೋ ಏನೋ! ಹಾಗಿಲ್ಲದಿದ್ದರೆ ಬಂಗಾಲ ಕಾಂಗ್ರೆಸ್ಸಿನ ಈ ನೀತಿಯ ಬಗ್ಗೆ ನೀವೇನು ಹೇಳುತ್ತೀರಿ? ಸುದ್ದಿ ಸ್ವಾರಸ್ಯಕರವೆನಿಸಬಹುದು, ಆದರೆ ಅಷ್ಟೇ ನಾಚಿಗ್ಗೇಡಿತನದ್ದೂ ಅನಿಸದಿದ್ದೀತೆ?

ಇತ್ತೀಚೆಗೆ ಬಂಗಾಲ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಸಮ್ಮೇಲನ ನಡೆಯಿತು. ಅದರ ಮೆರವಣಿಗೆಯಲ್ಲಿ ಅನೇಕ ನೂರಾರು ಚೀನಿ ವಿದ್ಯಾರ್ಥಿಗಳೂ ಸೇರಿಕೊಂಡಿದ್ದರು. ಭಾರತ ಚೀನಾಗಳು ಸಾರಿರುವ ಪಂಚಶೀಲ ನೀತಿಗೇ ವಿರೋಧವಾದ ಈ ಕ್ರಮ ಚೀನಾ-ಭಾರತಗಳ ಸ್ನೇಹದ ಬಗ್ಗೆಯೂ ಕಪ್ಪುಕಲೆಯನ್ನು ಅಂಟಿಸುವಂತಿದೆ.

ಪ್ರದೇಶ ಕಾಂಗ್ರೆಸ್ ಸಮಿತಿಯು ಸಮ್ಮೇಲನ ನಡೆಯುವದಕ್ಕೆ ಮುಂಚೆ ಒಂದು ಸ್ವಾಗತ ಸಮಿತಿಯನ್ನು ಏರ್ಪಡಿಸಿತು. ಇದಕ್ಕೆ ಎರಡು ಚೀನಿ ಶಾಲೆಗಳವರನ್ನು ಆಮಂತ್ರಿಸಿ ಮೆರವಣಿಗೆಯಲ್ಲಿ ಈ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಲು ಕೇಳಿಕೊಳ್ಳಲಾಯಿತು. ಈ ಶಾಲೆಗಳವರು ಕೂಮಿಂಗ್‌ಟಾಂಗ್‌ನ ಬೆಂಬಲಿಗರು. ಇನ್ನುಳಿದ ಬೇರೆ ಎರಡು ಚೀನಿ ಶಾಲೆಗಳನ್ನು ಆಮಂತ್ರಿಸಲಿಲ್ಲ ಮತ್ತು ಆ ಶಾಲೆಗಳವರಿಗೆ ನಮ್ಮ ದೇಶದ ಆಂತರಿಕ ವ್ಯವಹಾರಗಳಲ್ಲಿ ಪ್ರವೇಶಿಸುವುದೂ ಬೇಕಾಗಿರಲಿಲ್ಲ. ಕಾಂಗ್ರೆಸ್‌ನವರ ನೇತೃತ್ವದಲ್ಲಿ ನಡೆದ ನೆಹ್ರೂ ಜನ್ಮ ದಿನೋತ್ಸವಕ್ಕೆ ಕೂಡ ಈ ಕೂಮಿಂಗ್‌ಟಾಂಗ್ ಶಾಲೆಗಳವರನ್ನು ಆಹ್ವಾನಿಸಲಾಗಿತ್ತು. ಕಲಕತ್ತೆಯಿಂದ ಪ್ರಕಟವಾಗುವ ಸ್ಥಳೀಯ ಕೂಮಿಂಗ್‌ಟಾಂಗ್ ಪತ್ರಿಕೆ "ಚೈನೀಸ್ ಜರ್ನಲ್ ಆಫ್ ಇಂಡಿಯಾ"ವು ನಗರದ ಚೈನೀ ನಿವಾಸಿಗಳಿಗೆಲ್ಲ ಮೆರವಣಿಗೆಯಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿಕೊಂಡಿತ್ತಲ್ಲದೆ ಸಂಪಾದಕ ಚಾಂಗ್ ಸ್ವತಃ ತಾವೂ ಭಾಗವಹಿಸಿದ್ದರು.

ಕಳೆದ ಸಾರ್ವತ್ರಿಕ ಚುನಾವಣೆಗಳ ಕಾಲಕ್ಕೆ ಡಾ|| ಬಿ. ಸಿ. ರಾಯ್‌ರವರು ಇಲ್ಲಿಯ ಕೂಮಿಂಗ್‌ಟಾಂಗ್‌ನವರೊಡನೆ ಸಂಪರ್ಕ ಬೆಳೆಸಿದ್ದರಲ್ಲದೆ ಭಾರತದ ನಾಗರಿಕತೆಯನ್ನು ಸ್ವೀಕರಿಸಿರುವ ಚೀನಿಯರು ಕಾಂಗ್ರೆಸ್ಸಿಗೆ ಅಲ್ಲ ಬಿ.ಸಿ. ರಾಯರ ಪರವಾಗಿ ಕೆಲಸಮಾಡುವುದೂ ಕಂಡು ಬಂದಿತ್ತು ಎಂದು 'ಸ್ವಾಧೀನತಾ' ಎಂಬ ಪತ್ರಿಕೆ ವರದಿ ಮಾಡಿತ್ತು.

ಕಲಕತ್ತೆಯಲ್ಲಿರುವ ಕೂಮಿಂಗ್‌ಟಾಂಗ್ ತಂಡವು ಜನತಾ ಚೀನದ ವಿರೋಧವಾಗಿ ಅನೇಕ ಚಟುವಟಿಕೆಗಳಲ್ಲಿ ತೊಡಗಿದೆ. ಸ್ಥಳೀಯ ಪೋಲೀಸರು ಇದರ ಬಗ್ಗೆ ನಿರಾಸಕ್ತಿ ವಹಿಸಿದ ವಿಚಿತ್ರ ಭಾವನೆಯನ್ನು ಕಂಡು ಕೇಂದ್ರ ಸರಕಾರವೇ ಇದನ್ನು ಗಂಭೀರವಾಗಿ ಗಮನಕ್ಕೆ ತೆಗೆದುಕೊಂಡು 'ಚೈನೀಸ್ ಜರ್ನಲ್ ಆಫ್ ಇಂಡಿಯಾ' ಪತ್ರಿಕೆಯ ಇಬ್ಬರು ಸಂಪಾದಕರುಗಳಿಗೆ ಇದ್ದ ವೀಸಾ ವಿಸ್ತರಣೆಯನ್ನು ತಿರಸ್ಕರಿಸಿತು. ಇಷ್ಟೇ ಅಲ್ಲ, ಒಂದು ಶಾಲೆಯಿಂದ ಅಫೀಮಿನ ದೊಡ್ಡ ದಾಸ್ತಾನನ್ನೇ ಪೋಲೀಸರು ವಶಪಡಿಸಿಕೊಂಡರು.

ಕಳೆದ ಏಪ್ರಿಲ್ ನಾಲ್ಕರಂದು 'ಕೂಮಿಂಗ್‌ಟಾಂಗ್ ಮಕ್ಕಳ ದಿನಾಚರಣೆ' ನಡೆಯಿತು. ಆಗಲೂ ಈ ಎರಡು ಶಾಲೆಗಳ ಮಕ್ಕಳು ಮೆರವಣಿಗೆ ಹೊರಟು "ಚೀಯಾಂಗ್ ಕೈಷೇಕ್—ಜಿಂದಾಬಾದ್" ಎಂದು ಘೋಷಿಸಿದರಲ್ಲದೆ ಮಾವೊತ್ಸೆತುಂಗ್ ಮತ್ತು ನೂತನ ಚೀನಾದ ವಿರೋಧ ಘೋಷಣೆಗಳನ್ನು ಕೂಗಿದರು. ಪೋಲೀಸರು ಈಗಲೂ ಏನನ್ನೂ ಗಮನಿಸಲಿಲ್ಲ.

ಪಾರ್ಲಿಮೆಂಟಿನ ವರ್ಷಾಕಾಲದ ಅಧಿವೇಶನದಲ್ಲಿ ಈ ವಿಷಯ ಚರ್ಚೆಗೆ ಬರಲಿದೆಯೆಂದು ಗೊತ್ತಾಗುತ್ತದೆ. ರಾಜ್ಯ ಸಭೆಯಲ್ಲಿ ಕಮ್ಯೂನಿಸ್ಟ್ ನಾಯಕರಾದ ಶ್ರೀ ಭೂಪೇಶ್ ಗುಪ್ತರು "ಸ್ಥಳೀಯ ಕಾಂಗ್ರೆಸ್ಸಿಗರಿಂದ ಭಾರತದ ವಿದೇಶ ನೀತಿ ಬಳಲುವಂತಾಗಿದೆ. ಪ್ರಧಾನಿಯು ನಮ್ಮ ವಿದೇಶಾಂಗ ನೀತಿಯನ್ನು ರಕ್ಷಿಸಬೇಕು" ಎಂದು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ಜೀವ—ಸಾವುಗಳ ವಿಷಯದಲ್ಲಿ ರಷ್ಯನರ ಪ್ರಯೋಗ

ಸಾವನ್ನು ಜಯಿಸಿದ ಸಾಹಸ !

ಅಮೇರಿಕೆಯ ಕೊಲಂಬಿಯಾ ವಿಶ್ವವಿದ್ಯಾನಿಲಯದ ಮೆಡಿಕಲ್ ಸೆಂಟರಿನ ಡಾ| ಜೀನ್ ಹೇನ್ಲೆ ಅವರು ಇತ್ತೀಚೆಗೆ ಸೋವಿಯತ್ ರಷ್ಯದ ಸಂಚಾರವನ್ನು ಮುಗಿಸಿಕೊಂಡು ಬಂದರು. ನ್ಯೂಯಾರ್ಕಿನಲ್ಲಿ ಮಾತನಾಡುತ್ತ "ಸೋವೀಯತ್ ವಿಜ್ಞಾನಿಗಳು ಸಾವು ಮತ್ತು ಪುನರ್ಜೀವನದ ಬಗ್ಗೆ ಅಗಾಧ ಶೋಧನೆಯ ಕಾರ್ಯದಲ್ಲಿ ತೊಡಗಿದ್ದಾರೆ. ಸಾವಿನ ಕಾಲಕ್ಕೆ ಮಾನವ ದೇಹದಲ್ಲಾಗುವ ಬದಲಾವಣೆಗಳನ್ನು ಗಮನಿಸಿ ಅವುಗಳನ್ನು ಕೊಡೆದು ಹಾಕುವ ಅತ್ಯಂತ ಕ್ಲಿಷ್ಟವಾದ ವಿಚಾರದಲ್ಲಿ ವ್ಯವಸ್ಥಿತ ಸಂಶೋಧನೆಯನ್ನು ನಡೆಸಿದ್ದಾರೆ" ಎಂದು ಹೇಳಿದ್ದಾರೆ.

ಈ ಮಾನದಿಂದ ಅಮೇರಿಕೆಯಲ್ಲಿ ಏನೇನೂ ಕಾರ್ಯ ನಡೆದಿಲ್ಲವೆಂದು ಅವರ ಅಭಿಪ್ರಾಯ. ಇಂಥ ಪ್ರಯತ್ನಗಳು ಅಮೇರಿಕೆಯಲ್ಲಿ ನಡೆದಿವೆಯೋ ಇಲ್ಲವೋ ಎಂಬುದು ತಮಗೆ ಗೊತ್ತಿಲ್ಲವೆಂದೂ ಅವರು ಹೇಳಿದ್ದಾರೆ.

ಆಕೆ ಹೇಳಿದರು: "ದೈಹಿಕ ಪ್ರವೀಣರು, ಜೀವಶಾಸ್ತ್ರ ನಿಪುಣರು ಎಲ್ಲರೂ ತಮ್ಮ ಶಕ್ತಿಯನ್ನು ಈ ವಿಷಯದ ಮೇಲೆ ಕೇಂದ್ರೀಕರಿಸಿದ್ದಾರೆ. ಸಾವಿನ ಕಾಲಕ್ಕೆ ಸೆಲ್‌ಗಳಿಗೇನಾಗುತ್ತದೆ, ರಾಸಾಯನಿಕ ಹಾಗೂ ಶಾರೀರಿಕ ಬದಲಾವಣೆಗಳು ಏನು ನಡೆಯುತ್ತವೆ ಮತ್ತು ಜೀವದ ಪುನರ್‌ಪ್ರತಿಷ್ಠಾಪನೆಗೆ ಏನು ಕ್ರಮಗಳನ್ನು ಕೈಕೊಳ್ಳಬಹುದು ಎಂಬುದನ್ನು ತಿಳಿಯುತ್ತಿದ್ದಾರೆ".

ತನ್ನ ಐವರು ಮಹಿಳಾ ವಿಜ್ಞಾನಿ ಜೊತೆಗಾರ್ತಿಯರೊಡನೆ ರಷ್ಯದ ವೈಜ್ಞಾನಿಕ ಸಂಸ್ಥೆಗಳಿಗೆಲ್ಲ ಭೇಟಿಯಿತ್ತ ಡಾ| ಹೇನ್ಲೆ–ರಕ್ತ ಬಸಿದು ಹೋದ, ಐದು ನಿಮಿಷ ಸತ್ತು ಹೋದ ನಾಯಿಯೊಂದು ಮರಳಿ ಸಜೀವಿಯಾದ ಸ್ವಾರಸ್ಯಕರ ಕತೆಯೊಂದನ್ನು ಹೇಳುತ್ತ ಹೀಗೆ ತಿಳಿಸಿದರು "ಅದೊಂದು ನಿಜವಾಗಿ ವಿಸ್ಮಯಕಾರಿಯಾದ ಪರಿಣಾಮಕಾರಿಯಾದ ಸಂಗತಿ. ಆದರೆ ಪ್ರಪಂಚವನ್ನೇ ಅಲ್ಲಾಡಿಸುವ ಸುದ್ದಿಯಲ್ಲವೆಂದು ನನ್ನ ಭಾವನೆ".

ಸತ್ತ ನಾಯಿಗಳನ್ನು ಕೃತ್ರಿಮವಾದ ಶೀತಾಗಾರಗಳಲ್ಲಿಟ್ಟು ಪುನಃ ಸಜೀವವಾಗಿಸುತ್ತಾರೆಂಬುದು ನಿಜವಲ್ಲವೆಂದೂ ಅವರೀ ಪ್ರಯೋಗದಲ್ಲಿ ಶೀತಾಗಾರಗಳನ್ನು ತಾವೆಲ್ಲೂ ನೋಡಲಿಲ್ಲವೆಂದೂ ಡಾ| ಹೇನ್ಲೇ ಹೇಳಿದ್ದಾರೆ.

ರೋಡ್‌ಗೇಂಗ್ ವರ್ಕರ್ಸ್ ಯೂನಿಯನ್ನಿಗೆ ಮಜೂರರ ನಮಸ್ಕಾರ

ಐ. ಎನ್. ಟಿ. ಯು. ಸಿ.ಯ ಮಜೂರ ಪ್ರೇಮಕ್ಕೆ ಉತ್ತರ!

ದ. ಕ. ಮುನಿಸಿಪಲ್ ಎಂಡ್ ಲೋಕಲ್ ಬೋರ್ಡ್ ಗೇಂಗ್ ವರ್ಕರ್ಸ್ ಯೂನಿಯನ್ನಿಗೆ ಮಂಗಳೂರು ಮುನ್ಸಿಪಾಲಿಟಿಯ ರೋಡ್ ಗೇಂಗಿನ ಎಲ್ಲಾ ಮಜೂರರು ತಾ. 21—6—58ರಂದು ರಾಜಿನಾಮೆ ಕೊಟ್ಟಿರುತ್ತಾರೆ.

ರಾಜಿನಾಮೆ ಕೊಟ್ಟ ರೋಡ್ ಗೇಂಗ್ ಮಜೂರರು ತಾ. 22—6—58ರಂದು ಶ್ರೀ ಕೆ. ಮೋನಪ್ಪ ಶೆಟ್ಟರ ಅಧ್ಯಕ್ಷತೆಯಲ್ಲಿ ಸಭೆಸೇರಿ, ದ. ಕ. ಮುನಿಸಿಪಲ್ ಎಂಡ್ ಲೋಕಲ್ ಬೋರ್ಡು ವರ್ಕರ್ಸ್ ಯೂನಿಯನ್‌ನ ಸದಸ್ಯರಾಗಿ ಸೇರಲು ನಿರ್ಧರಿಸಿರುತ್ತಾರೆ.

ಮಂಗಳೂರು ಮುನಿಸಿಪಾಲಿಟಿಯ ರೋಡ್ ಗೇಂಗ್ ಮಜೂರರು ಹಿಂದೆ ದ. ಕ. ಮುನಿಸಿಪಲ್ ಎಂಡ್ ಲೋಕಲ್ ಬೋರ್ಡು ವರ್ಕರ್ಸ್ ಯೂನಿಯನಿನ ಸದಸ್ಯರಾಗಿದ್ದರು. ಮಾಜಿ ಎಂ. ಎಲ್. ಎ. ಮತ್ತು ಮುನಿಸಿಪಲ್ ಕಂಟ್ರಾಕ್ಟರರಾದ ಶ್ರೀ ಕೆ. ಈಶ್ವರನವರು ಈ ಮಜೂರರನ್ನು ಕುಟಿಲ ನೀತಿ ಮತ್ತು ಜಾತಿ ವಾತ್ಸಲ್ಯವನ್ನು ಪ್ರದರ್ಶಿಸಿ ಈ ಯೂನಿಯನ್ ಬಿಡುವಂತೆ ಮಾಡಿ ದ. ಕ. ಮುನಿಸಿಪಲ್ ಎಂಡ್ ಲೋಕಲ್ ಬೋರ್ಡ್ ರೋಡ್ ಗೇಂಗ್ ವರ್ಕರ್ಸ್ ಯೂನಿಯನ್ ಎಂಬ ಹೆಸರಿನಿಂದ ಪ್ರತ್ಯೇಕ ಸಂಘವೊಂದನ್ನು ಸ್ಥಾಪಿಸಿದರು. ಆ ಸಂಘ ಸ್ಥಾಪನೆಯಾದ ಕೆಲವೇ ಸಮಯದೊಳಗೆ ಹರಿಜನ ಮುಂದಾಳು ಮತ್ತು ಮಾಜಿ ಎಂ. ಎಲ್. ಎ. ಹಾಗೂ ಕಾಂಗ್ರೆಸಿಗರಾದ ಶ್ರೀ ಕೆ. ಈಶ್ವರನವರ ಮಜೂರ ಪ್ರೇಮವನ್ನು ಅರಿತ ಮಂಗಳೂರು ಮುನಿಸಿಪಲ್ ರೋಡ್ ಗೇಂಗ್ ಮಜೂರರು ಆ ಯೂನಿಯನಿಗೆ ರಾಜಿನಾಮೆ ಕೊಟ್ಟು ತಮ್ಮ ಹಿಂದಿನ ಯೂನಿಯನಿಗೆ ಪುನಃ ಬಂದು ಸೇರಿರುವರು. ಇದು ನಮ್ಮ ಜಿಲ್ಲೆಯಲ್ಲಿ ಐ. ಎನ್. ಟಿ. ಯು. ಸಿ.ಯನ್ನು ಕಟ್ಟಲು ಶ್ರಮಿಸುತ್ತಿರುವ ಕಾಂಗ್ರೆಸಿಗರಲ್ಲಿರುವ ಮಜೂರ ಪ್ರೇಮಕ್ಕೊಂದು ಉತ್ತಮ ಉದಾಹರಣೆ.

ರೋಡ್ ಗೇಂಗ್ ಕೆಲಸಗಾರರ ಸಭೆ

ಮಂಗಳೂರು ಮುನಿಸಿಪಲ್ ರೋಡ್ ಗೇಂಗ್ ಲೋಕಲ್ ಬೋರ್ಡ್ ಕೆಲಸಗಾರರ ಸಂಘದ ಆಶ್ರಯದಲ್ಲಿ ಸಭೆಯು ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಮುನಿಸಿಪಾಲಿಟಿಯ ಎಲ್ಲಾ ಕೆಲಸಗಾರರಿಗೆ ನೌಕರರಿಗೆ ಮತ್ತು ಉಪಾಧ್ಯಾಯರಿಗೆ ಸರಕಾರಿ ಸ್ಕೇಲಿನಂತೆ ಸಂಬಳ ನಿರ್ಣಯಿಸುವಾಗ ರೋಡ್ ಗೇಂಗ್ ಕೆಲಸಗಾರರನ್ನು ಮಾತ್ರ ಮರೆತುಬಿಟ್ಟು ಅವರು ಈಗಿನ ಅಲ್ಪ ಸಂಬಳದಲ್ಲೇ ದುಡಿಯುವಂತೆ ಮಾಡುವುದು ಸರಿಯಲ್ಲ. ರೋಡ್ ಗೇಂಗ್ ಕೆಲಸಗಾರರಿಗೂ ಸರಕಾರಿ ಸ್ಕೇಲಿನಂತೆ ಸಂಬಳ ಕೊಡಬೇಕೆಂದು ನಗರ ಸಭೆಯನ್ನು ಕೇಳಿಕೊಳ್ಳಲು ನಿರ್ಣಯವಾಯಿತು. ಅಲ್ಲದೆ ಮುಂದೆ ಹೇಳುವ ಕೇಳಿಕೆಗಳನ್ನು ನಗರ ಸಭೆಯ ಮುಂದಿಡಲು ತೀರ್ಮಾನವಾಯಿತು. (1) ತಿಂಗಳಿಗಿಂತ ಹೆಚ್ಚು ಸರ್ವಿಸ್ ಮಾಡಿದವರನ್ನು ಖಾಯಂ ಮಾಡಬೇಕು. (2) ಎಲ್ಲಾ ರೋಡ್ ಗೇಂಗ್ ಕೆಲಸಗಾರರಿಗೂ ವರ್ಷದಲ್ಲಿ ಎರಡು ಇಜಾರು ಮತ್ತು ಎರಡು ಶರ್ಟು ಕೊಡಬೇಕು. (3) ಎಲ್ಲಾ ರೋಡ್ ಗೇಂಗ್ ಕೆಲಸಗಾರರಿಗೂ ವರ್ಷಕ್ಕೆ ಒಂದು ಜತೆ ಮೆಟ್ಟು ಕೊಡಬೇಕು. (4) ಸಾಮಾಜಿಕ ಮತ್ತು ರಾಷ್ಟ್ರೀಯ ವಿಶೇಷ ದಿನಗಳೆಂದು ಸಂಬಳ ಸಹಿತ ರಜೆ ಕೊಡಬೇಕು. (5) ಮಳೆಗಾಲದಲ್ಲಿ ಎಲ್ಲರಿಗೂ ಪನೋಳಿ ಕೊಡಬೇಕು. (7) ವಿಚಾರಣೆ ನಡೆಸದೆ ಶಿಕ್ಷೆ ವಿಧಿಸಬಾರದು.

ಸಭೆಯಲ್ಲಿ ಶ್ರೀ ಕೆ. ಮೋನಪ್ಪ ಶೆಟ್ಟರು ಮಾತಾಡಿ ಎಲ್ಲಾ ಮಜೂರರೂ ಸ್ಥಿರ ಮನಸ್ಸಿನಿಂದ ಯೋಗ್ಯ ಮುಂದಾಳುತನವಿರುವ ಕೆಂಪು ಬಾವುಟೆಯ ಯೂನಿಯನಿನಲ್ಲಿ ಸೇರಿ ಚಳುವಳಿ ನಡೆಸುವುದರ ಮೂಲಕ ಮಾತ್ರ ಮಜೂರರ ಹಿತರಕ್ಷಿಸಲಿಕ್ಕೂ, ಕೇಳಿಕೆಗಳನ್ನು ಪಡೆಯಲಿಕ್ಕೂ ಸಾಧ್ಯವೆಂದು ಹೇಳಿದರು.

ಕೊನೆಗೆ ಅಧ್ಯಕ್ಷರು ಭಾಷಣ ಮಾಡಿ ಎಲ್ಲಾ ಮುನಿಸಿಪಲ್ ಮಜೂರರೂ ನೌಕರರೂ ದ. ಕ. ಮುನ್ಸಿಪಲ್ ಎಂಡ್ ಲೋಕಲ್ ಬೋರ್ಡ್ ವರ್ಕರ್ಸ್ ಯೂನಿಯನಿನ ಸದಸ್ಯರಾಗಿ ಸೇರಿದ ಸಂಘವನ್ನು ಬಲಪಡಿಸಬೇಕೆಂದು ಕೇಳಿಕೊಂಡರು.

ಬಾಗಲಕೋಟೆ ಸಿಮೆಂಟ್ ಕೆಲಸಗಾರರ ಪ್ರಚಂಡ ವಿಜಯ

ಅನ್ಯಾಯವಾಗಿ ನೌಕರಿಯಿಂದ ತೆಗೆದು ಹಾಕಿದ್ದರ ವಿರುದ್ಧ ಮಹಮ್ಮದ್ ಗೌಸರು ತಾ. 30—6—58ರಿಂದ ಅನ್ನ ಸತ್ಯಾಗ್ರಹ ಕೈಕೊಂಡಿದ್ದರು. ಇವರು ಅನ್ನ ಸತ್ಯಾಗ್ರಹ ಆರಂಭಿಸುವ ಮೊದಲು ಕಂಪೆನಿಯವರು ಒಂದು ಸರ್ಕ್ಯುಲರ್ ಹೊರಡಿಸಿ ಮಹಮ್ಮದ ಗೌಸರಿಗೆ ಬೆಂಬಲ ಕೊಟ್ಟವರನ್ನೆಲ್ಲ ಕೆಲಸದಿಂದ ಕಿತ್ತುಹಾಕಲಾಗುವುದೆಂದು ಬೆದರಿಕೆ ಹಾಕಿದ್ದರು. ಅದರಂತೆಯೇ ಕಂಪೆನಿಯವರೂ, ಪೋಲಿಸರೂ ಕೂಡಿ, ಗೌಸ್ ಅನ್ನ ಸತ್ಯಾಗ್ರಹ ಮಾಡಿದರೆ, ಆತ್ಮ ಹತ್ಯ ಮಾಡಿಕೊಳ್ಳಲು ಪ್ರಯತ್ನ ಮಾಡಿದ್ದಾನೆಂದು ಅವನನ್ನು ಹಿಡಿದುಹಾಕಿ, ಅವನ ಮೇಲೆ ಖಟ್ಲೆ ಹಾಕಲಾಗುವುದೆಂದೂ ಅಪಪ್ರಚಾರ ಮಾಡಿ ಕೆಲಸಗಾರರನ್ನು ಅಂಜಿಸಲು ಸತತ ಪ್ರಯತ್ನ ಮಾಡಿದರು. ನ್ಯಾಯಕ್ಕಾಗಿ ಹೋರಾಡುತ್ತಿರುವ ಕೆಲಸಗಾರರು ಈ ಪೊಳ್ಳು ಪ್ರಚಾರಕ್ಕೆ ಬಲಿಯಾಗಲಿಲ್ಲ.

ಕೆಲಸಗಾರರೂ, ನಾಗರೀಕರೂ, ಗೌಸರ ಅನ್ನ ಸತ್ಯಾಗ್ರಕ್ಕೆ ಸಂಪೂರ್ಣ ಬೆಂಬಲ ನೀಡಿದರು. ನೂರಾರು ಜನ ಹೆಂಗಸರೂ, ನಾಗರೀಕರೂ, ವಿದ್ಯಾರ್ಥಿಗಳೂ ಅನ್ನ ಸತ್ಯಾಗ್ರಹಿಯ ಬಳಿ ಬಂದು ಸಹಾನುಭೂತಿ ತೋರಿಸುತ್ತಿದ್ದರು. ಅನ್ನ ಸತ್ಯಾಗ್ರಹದ ಸುದ್ದಿ ಕೇಳಿ ಮುಂಬಯಿಯಿಂದ ಕಂಪೆನಿಯ ಸೆಕ್ರೆಟರಿಯವರೂ ಬಾಗಲಕೋಟೆಗೆ ಓಡಿಬಂದರು. ತಾ. 2—7—58ಕ್ಕೆ ಹುಬ್ಬಳ್ಳಿಯಲ್ಲಿರುವ ಅಸಿಸ್ಟೆಂಟ್ ಲೇಬರ್ ಕಮಿಶನರ ಕಚೇರಿಯಲ್ಲಿ ಕಂಪೆನಿಯ ಪ್ರತಿನಿಧಿ ಮತ್ತು ಕೆಲಸಗಾರರ ಸಂಘದ ಅಧ್ಯಕ್ಷರಾದ ಎನ್. ಕೆ. ಉಪಾಧ್ಯಾಯರ ನಡುವೆ ಸುದೀರ್ಘ ಚರ್ಚೆಯಾಯಿತು. ಕೆಲಸಗಾರರ ಸಂಘದ ಕೂಡ ತಮಗೇನೂ ಸಂಬಂಧವಿಲ್ಲ, ಆದರ ಪ್ರತಿನಿಧಿಯ ಕೂಡ ಚರ್ಚೆ ಮಾಡಲೂ ಸಾಧ್ಯವಿಲ್ಲೆಂದೂ ಕಂಪೆನಿಯ ಪ್ರತಿನಿಧಿಗಳು ಎಷ್ಟು ಪ್ರಯತ್ನ ಮಾಡಿದರೂ ಸಾಧ್ಯವಾಗಲಿಲ್ಲ. ಕೊನೆಗೆ ಅವರ ಯೂನಿಯನ್ನಿನ ಅಧ್ಯಕ್ಷರ ಕೂಡೆ ಒಪ್ಪಂದ ಮಾಡಿಕೊಳ್ಳಲೇ ಬೇಕಾಯಿತು. ಮಹಮ್ಮದ ಗೌಸರನ್ನು ಮತ್ತೆ ನೌಕರಿಯ ಮೇಲೆ ತೆಗೆದುಕೊಳ್ಳುತ್ತೇವೆಂದು ಒಪ್ಪಿಕೊಂಡದ್ದಲ್ಲದೆ, ನೌಕರಿಯಿಂದ ತೆಗೆದು ಹಾಕಲ್ಪಟ್ಟ ಇನ್ನಿಬ್ಬರು ಕೆಲಸಗಾರರಾದ ಗುಳೇದಗುಡ್ಡ ಮತ್ತು ನಾಲತವಾಡ ಎಂಬವರ ಕುರಿತೂ ಪುನರ್ವಿಚಾರ ಮಾಡುವುದಾಗಿ ಒಪ್ಪಿಕೊಂಡರು.

ನಾಲ್ಕು ದಿನಗಳ ಉಪವಾಸದ ನಂತರ 3ನೇ ತಾರೀಕಿನ ದಿವಸ ಸಂಜೆ 4 ಘಂಟೆಗೆ ಕೆಲಸಗಾರರ ಮತ್ತು ನಾಗರಿಕರ ಸಮಕ್ಷಮ, ಗೌಸರಿಗೆ ಮುಸಂಬಿ ರಸ ಕುಡಿಸಿ ಅನ್ನ ಸತ್ಯಾಗ್ರಹ ಮುಗಿಸಲಾಯಿತು. ಆ ನಂತರ ಕೆಲಸಗಾರರ ಮತ್ತು ನಾಗರೀಕರ ಪ್ರಚಂಡ ಮೆರವಣಿಗೆ ಕಂಪೆನಿ ರಸ್ತೆಯಿಂದ ಹೊರಟು ಊರಲ್ಲಿ ತಿರುಗಾಡಿ ವಲ್ಲಭಭಾಯಿ ಚೌಕಿನಲ್ಲಿ ಸಾರ್ವಜನಿಕ ಸಭೆ ಜರುಗಿತು. 200 ಹೆಂಗಸರೂ ಈ ಮೆರವಣಿಗೆಯಲ್ಲಿ ಭಾಗವಹಿಸಿ "ಲಾಲ್ ಬಾವುಟ ಜಿಂದಾಬಾದ್" "ಕಾಮ್‌ಗಾರ ಸಂಘ ಜಿಂದಾಬಾದ್" "ಮಹಮ್ಮದ್ ಗೌಸ ಜಿಂದಾಬಾದ್" ಎಂದು ಘೋಷಣೆ ಮಾಡಿ ತಮ್ಮ ಉತ್ಸಾಹ ಪ್ರದರ್ಶಿಸಿದರು. ಸಾರ್ವಜನಿಕ ಸಭೆಯಲ್ಲಿ ಎನ್. ಕೆ. ಉಪಾಧ್ಯಾಯ, ಬಿ. ಎಚ್. ಮಾಗಿ ಮತ್ತು ಗುಲಬರ್ಗದ ಶ್ರೀನಿವಾಸ ಗುಡಿಯವರು ಭಾಷಣ ಮಾಡಿ, ಕೆಲಸಗಾರರಿಗೆ ಯಶಸ್ಸು ತಂದುಕೊಟ್ಟದ್ದಕ್ಕಾಗಿ, ಗೌಸರ ಹಾಗೂ, ಕೆಲಸಗಾರರ ಆಭಾರ ಮನ್ನಿಸಿ, ಕೆಲಸಗಾರರ ಇದು ಮೊದಲನೆಯ ವಿಜಯವೆಂದೂ, ಕೆಲಸಗಾರರೆಲ್ಲ ಒಗ್ಗಟ್ಟಾಗಿ, ಸಂಘಶಕ್ತಿಯನ್ನ ಬೆಳಸಿ ತಮ್ಮ ಇತರ ಬೇಡಿಕೆಗಳನ್ನು ಪಡೆಯಲು ತಯಾರಾಗಬೇಕೆಂದೂ ಹೇಳಿದರು.

ಗೌಸರ ಹಾಗೂ ಕೆಲಸಗಾರರ ಈ ವಿಜಯದಿಂದ ಕೆಲಸಗಾರರಲ್ಲಿ ಒಂದು ಹೊಸ ಹುರುಪು, ಹುಮ್ಮಸ್ಸು ತುಂಬಿಬಂದಿದೆ. ಕಾರ್ಖಾನೆಯ ಮಾಲಿಕರು ತಮ್ಮ ಕುತಂತ್ರವನ್ನು ಸಿಲ್ಲಿಸಿ, ಕೆಲಸಗಾರರ ನ್ಯಾಯವಾದ ಬೇಡಿಕೆಗಳನ್ನು ಮಂಜೂರು ಮಾಡಲು ಇನ್ನಾದರೂ ಮುಂದೆ ಬರುವರೆಂದು ಜನರೆಲ್ಲ ಅಪೇಕ್ಷಿಸುತ್ತಿದ್ದಾರೆ.

ದೊಡ್ಡಬಳ್ಳಾಪುರ—

ಹೋಟೆಲು ಕಾರ್ಮಿಕರ ಸಭೆ

ತಾ. 12—7—58ರಂದು ಇಲ್ಲಿನ ಪವರ್ ಲೂಂ ಕಾರ್ಮಿಕರ ಸಂಘದ ಆಫೀಸಿನಲ್ಲಿ ಹೋಟೆಲ್ ಕೆಲಸಗಾರರ ಸಭೆಯು ನಡೆಯಿತು. ಜಿಲ್ಲಾ ಹೋಟೆಲ್ ಕೆಲಸಗಾರ ಸಂಘದ ಅಧ್ಯಕ್ಷ ಮರಿದಾಸ್‌ರವರು ಭಾಗವಹಿಸಿದ್ದರು. ಲೇಬರ್ ಇಲಾಖೆಯವರು ಹೋಟೆಲ್ ಕಾರ್ಮಿಕರ ಬಗ್ಗೆ ಅನಾದರ ತೋರುತ್ತಿರುವುದನ್ನು ಪ್ರಸ್ತಾಪಿಸಿ ಈ ಊರಿನ ಮೂರು ಹೋಟೆಲ್‌ಗಳು ವಾರದ ರಜಾ ಸಹ ಕೊಡದೆ ಇರುವ ಬಗ್ಗೆ ಪ್ರತಿಭಟನೆ ಸಲ್ಲಿಸಿ, ಸಂಬಂಧಪಟ್ಟ ಇಲಾಖೆಯು ಸಿಗಾ ಕೊಡಬೇಕೆಂದು ಕೋರಲಾಯಿತು. ಕಾರ್ಮಿಕರಿಗೆ ಇರುವ ಕನಿಷ್ಠ ಸೌಲಭ್ಯ ಮತ್ತು ವೇತನಗಳು ಸಹ ಜಾರಿಯಲ್ಲಿಲ್ಲದ ಪ್ರಯುಕ್ತ ಮುಂದಿನ ಕಾರ್ಯಕ್ರಮ ಕೈಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ಇದಕ್ಕಾಗಿ ಈ ನಗರಕ್ಕೆ ಸಂಭಂದಿಸಿದಂತೆ ಒಂದು ಉಪ ಸಮಿತಿಯನ್ನು ರಚಿಸಿ, ಶ್ರೀ ಎಂ. ನಾರಾಯಣಪ್ಪನವರನ್ನು ಸೆಕ್ರೆಟರಿಯನ್ನಾಗಿಯೂ, ಶ್ರೀ ಸುಬ್ಬಣ್ಣನವರನ್ನು ಸಂಚಾಲಕರನ್ನಾಗಿಯೂ ನೇಮಿಸಲಾಯಿತು. ಈ ಸಭೆಯಲ್ಲಿ ತಾಲ್ಲೂಕು ರೈತ ಸಂಘದ ಅಧ್ಯಕ್ಷರಾದ ಶ್ರೀ ಹೆಚ್. ಮುಗುವಾಳಪ್ಪನವರು ಸಹ ಹಾಜರಿದ್ದರು.

ಕೊಳ್ಳೆಗಾಲ ಪಂಚಾಯಿತಿ ಕೆಲಸಗಾರರ ಯಶಸ್ಸು

ಸರಕಾರವು ಹೊರಡಿಸಿರುವ ಆಜ್ಞೆಯಂತೆ ತುಟ್ಟಿ ಭತ್ಯವನ್ನು ಕೊಡಲು ಕೊಳ್ಳೆಗಾಲದ ಪಂಚಾಯಿತಿ ಅಧಿಕಾರಿಗಳು ತಡಮಾಡಿದ್ದರಿಂದಲೂ ಮತ್ತು ಹೊಸ ಸ್ಕೇಲು ಸಂಬಳಗಳನ್ನು ಕೊಡದೆಯಿರುವುದರಿಂದಲೂ ಅಲ್ಲಿಯ ಕೆಲಸಗಾರರು ತಮ್ಮ ಬೇಡಿಕೆಗಳು ಈಡೇರುವವರೆಗೂ ಈ ತಿಂಗಳ ಸಂಬಳವನ್ನು ತೆಗೆದುಕೊಳ್ಳದೆ ಇದ್ದರು. ಇವರ ಒಗ್ಗಟನ್ನು ಮುರಿಯುವ ಸಲುವಾಗಿ ತಾ. 8–7–58ರಲ್ಲಿ ಮೂರು ಜನ ಕೆಲಸಗಾರರನ್ನು ಸಸ್ಪೆಂಡು ಮಾಡುವುದಾಗಿ ಅಧಿಕಾರಿಗಳು ನೋಟೀಸು ಕೊಟ್ಟ ತಕ್ಷಣ ಎಲ್ಲಾ ಕೆಲಸಗಾರರು ಮಾಡುತ್ತಿದ್ದ ಕೆಲಸವನ್ನು ಒಟ್ಟು ಮುಷ್ಕರ ನಡೆಸಿದರು. ಅಂದು ಸಾಯಂಕಾಲವೇ ಅಧಿಕಾರಿಗಳು ಸಸ್ಪೆಂಡ್ ಮಾಡಿದವರನ್ನು ಕೆಲಸದ ಮೇಲೆ ತೆಗೆದುಕೊಳ್ಳಲಾಗಿ ಎಲ್ಲಾ ಕೆಲಸಗಾರರು ಕೆಲಸದ ಮೇಲೆ ಹಾಜರಾದರು. ಮೈಸೂರು ಜಿಲ್ಲಾ ಮುನಿಸಿಪಲ್ ಕೆಲಸಗಾರರ ಸಂಘವು ಹೊಸ ಸ್ಕೇಲು ಸಂಬಳವು ಜಾರಿಗೆ ಬರದಿದ್ದರೆ ತಾ. 24-8-58ರಿಂದ ಮುಷ್ಕರಹೂಡುವುದಾಗಿ ಮುಷ್ಕರದ ನೋಟೀಸನ್ನು ಕೊಟ್ಟಿರುತ್ತದೆ.

ಬಿಜಾಪುರ ಗಡಿಯಲ್ಲಿ ಅಕ್ಕಿಯ ಕಳ್ಳ ಸಾಗಾಟ ಮುಂದೊರೆದಿದೆ !

ಆಂಧ್ರದ ಅಕ್ಕಿ ಬಿಜಾಪುರಕ್ಕೆ ಬಂದು, ಅಲ್ಲಿಂದ ಮಹಾರಾಷ್ಟ್ರಕ್ಕೆ ಒಂದು ಲಕ್ಷಕ್ಕೂ ಹೆಚ್ಚು ಚೀಲ ಅಕ್ಕಿ ಕಳ್ಳ ಸಾಗಾಟವಾಗಿದೆ. ಕಳ್ಳ ಸಾಗಾಟ ಮಾಡುವುದರ ಸಲುವಾಗಿ ವ್ಯಾಪಾರಸ್ಥರು ಅನುಸರಿಸುವ ಪದ್ಧತಿ ಬಹಳ ಕೌಶಲ್ಯದ್ದಾಗಿದೆ. ಬಿಜಾಪುರದಲ್ಲಿಯ ವ್ಯಾಪಾರಸ್ಥರು ಬಿಜಾಪುರದಲ್ಲಿಯೂ ಮತ್ತು ಸೋಲಾಪುರ ಮತ್ತು ಇತರ ಗಡಿ ಪ್ರದೇಶದಲ್ಲಿಯೂ ಅಕ್ಕಿಯನ್ನು ಶೇಖರಣೆ ಮಾಡುವುದರ ಸಲುವಾಗಿ ಪರ್ಮಿಟ್ ತೆಗೆದುಕೊಳ್ಳುತ್ತಾರೆ. ಅಕ್ಕಿಯನ್ನು ಗಡಿ ಪ್ರದೇಶದಲ್ಲಿಯ ಹಳ್ಳಿಯ ಗೋಡೌ

ಕಾಂಗ್ರೆಸ್ಸಿಗರ ಪಾತ್ರ ಇದರಲ್ಲಿ ಎಷ್ಟಿದೆ ?

ನಿಗೆ ಒಯ್ಯುತ್ತೇವೆಂದು, ಟ್ರಕ್ಕಿನಲ್ಲಿ ತುಂಬಿಕೊಂಡು ಹೋಗುತ್ತಾರೆ. ಹೀಗೆ ಟ್ರಕ್ಕಿನಲ್ಲಿ ಅಕ್ಕಿ ಒಯ್ಯುವಾಗ, ಪೋಲೀಸ್ ಠಾಣೆಯಿದ್ದಲ್ಲೆಲ್ಲ ರೂ. 2 ರಿಂದ ಹಿಡಿದು ರೂ. 10ರ ತನಕ "ಮಾಮೂಲಿ" ಕೊಡುತ್ತಾರೆ. ಕಾಯಿದೇಶೀರಾಗಿ ಯಾರಾದರೂ ತಕ್ರಾರು ಮಾಡಿದರೆ, ಇಂಥ ಹಳ್ಳಿಯ ತಮ್ಮ ಗೋಡೌನಿಗೆ ತಗೊಂಡು ಹೋಗುತ್ತೇವೆಂದು ಪಾರಾಗುತ್ತಾರೆ. ಹಳ್ಳಿಯ ಗೋಡೌನಿನಿಂದ ಅಕ್ಕಿ ಚೀಲಗಳನ್ನು ರಾತ್ರಿಯಲ್ಲಿ ಗಡಿ ದಾಟಿಸಿ ಬಿಡುತ್ತಾರೆ. ಪೋಲೀಸ್ ಶಾಖೆಯ ಬೆಂಬಲವಿರುವುದರಿಂದ, ಹೆಚ್ಚಿನ ಕಳ್ಳ ಸಾಗಾಟವೆಲ್ಲ ಹಗಲು ಹೊತ್ತಿಗೆ "ಮಾಮೂಲಿ"ಯ ಆಶೀರ್ವಾದದಿಂದಲೇ ನಡೆಯುತ್ತಿದೆ. ಇದಕ್ಕೇ ಹೇಳಬೇಕು ಪೋಲೀಸರ ರಾಮರಾಜ್ಯವೆಂದು !

ಬಿಜಾಪುರದಲ್ಲಿ ಈ ಕಳ್ಳ ಸಾಗಾಟ ಬಯಲಿಗೆ ಬಿದ್ದದ್ದು ನೋಡಿ ವ್ಯಾಪಾರಸ್ಥರು ಮತ್ತೊಂದು ಉಪಾಯ ಕಂಡು ಹಿಡಿದಿದ್ದಾರೆ. ಆಂಧ್ರದಿಂದ ಅಕ್ಕಿ ಚೀಲಗಳು, ಅಲ್ಲಿಯ ವ್ಯಾಪಾರಸ್ಥರಿಂದ ಬಾಗಲಕೋಟೆ, ತೆಲಗಿ, ಇಂಡಿ ರೈಲ್ವೆಸ್ಟೇಷನುಗಳಿಗೆ "ಸೆಲ್ಫ್" ("ಸ್ವತಃ ತಾನೇ") ಎಂಬ ಲೇಬಲಿನ ಮೇಲೆ ಬರಹತ್ತಿವೆ. ಈ ಸ್ಟೇಶನುಗಳಲ್ಲಿ ಅಕ್ಕಿ ಚೀಲಗಳು ಬಂದು ಬೀಳುತ್ತವೆ. "ಸೆಲ್ಫ್" ಎಂದು ಬರೆದಿರುವುದರಿಂದ ಯಾವ ವ್ಯಾಪಾರಸ್ಥರ ಮೇಲೂ ಸಂಶಯ ಬರುವಂತಿಲ್ಲ. ರೈಲ್ವೆಸ್ಟೇಷನಿನಲ್ಲಿ ಸ್ಥಳೀಯ ವ್ಯಾಪಾರಸ್ಥರು ತಮ್ಮ "ಕರ್ತವ್ಯ ಕರ್ಮ" ಮಾಡಿ ಯಾರಿಗೂ ತಿಳಿಯದಂತೆ ಈ ಚೀಲಗಳ ಬಂದೋಬಸ್ತ ಮಾಡುತ್ತಿರುವರು. ಇಲ್ಲಿಯ ವ್ಯಾಪಾರಸ್ಥರ ಹೆಸರಲ್ಲಿ ಪಾವತಿ ಕಳಿಸಿದರೆ ಗೊತ್ತಾಗುತ್ತದೆಂದು ತಿಳಿದು, ಆಂಧ್ರದಿಂದ ಕಳುಹಿಸುವಾಗಲೇ "ಸೆಲ್ಫ್" ಎಂದು ಬರೆಸಿದರೆ ವ್ಯಾಪಾರದ ಗುಟ್ಟು ರಟ್ಟಾದರೂ ಯಾರನ್ನೂ ಪತ್ತೆಹಚ್ಚಲಿಕ್ಕೆ ಬರುವುದಿಲ್ಲೆಂದು ಹೊಸ ಮಾದರಿಯ ಕಳ್ಳ ವ್ಯಾಪಾರಿಗಳ ಗುಂಪು ತಯಾರಾಗಿದೆ. ಈ ಗುಟ್ಟು ಹೊರಬಿದ್ದ ಕೂಡಲೇ ತೆಲಗಿ ಮೊದಲಾದ ಸ್ಟೇಶನುಗಳಲ್ಲಿ ಇಳಿಸಲ್ಪಟ್ಟ ಅಕ್ಕಿ ಚೀಲಗಳನ್ನು ತೆಗೆದುಕೊಂಡು ಹೋಗಲು ಯಾವ ವ್ಯಾಪಾರಸ್ಥರೂ ಮುಂದೆ ಬರಲಾರದಾಗಿದ್ದಾರೆ.

ಬಿಜಾಪುರದ ಡೆಪ್ಯುಟಿ ಕಮೀಶನರು ಅಕ್ಕಿ ವ್ಯಾಪಾರಸ್ಥರ ಕೆಲವು ಲೈಸೆನ್ಸ್‌ಗಳನ್ನು ರದ್ದು ಮಾಡಿದ್ದರೂ ಕೂಡ, ಪ್ರಮುಖ ವ್ಯಾಪಾರಿಗಳೂ ಮತ್ತು ಮಾರವಾಡಿ ದೊಡ್ಡ ವ್ಯಾಪಾರಸ್ಥರು ಬೆಂಗಳೂರಲ್ಲಿರುವ ಡೈರೆಕ್ಟರ್ ಆಫ್ ಫುಡ್ ಸಪ್ಲೈಜ್ ಇವರಿಗೆ 'ವಶೀಲಿ' ಹಚ್ಚಿ, ಡೆಪ್ಯುಟಿ ಕಮಿಶನರ ಹುಕುಮಿನ ಮೇಲ್ಕೆ ತಡೆಯಾಜ್ಞೆ ತಂದು ತಮ್ಮ ಕಳ್ಳ ವ್ಯಾಪಾರವನ್ನು ಮತ್ತೆ ಪ್ರಾರಂಭಿಸಿರುವರು. ಮುಖ್ಯ ಮಂತ್ರಿ ಜತ್ತಿಯವರು ತಮ್ಮ ಆಡಳಿತೆ ಸುಧಾರಿಸುವ ಪದ್ಧತಿಯೇ ಇದು? ಬಿಜಾಪುರದ ಡೆಪ್ಯುಟಿ ಕಮಿಶನರು ಮಾಡಿದ ಕೆಲಸವನ್ನು ಜನತೆ ಸ್ವಾಗತ ಮಾಡುತ್ತಿರುವಾಗ, ಕಾಂಗ್ರೆಸ್ ಎಂ.ಎಲ್.ಎ. ಮತ್ತು ದೊಡ್ಡ ವ್ಯಾಪಾರಸ್ಥರ ಒತ್ತಾಯಕ್ಕೆ ಬಲಿಬಿದ್ದು, ಕಳ್ಳ ವ್ಯಾಪಾರಕ್ಕೆ ಪ್ರೋತ್ಸಾಹ ನೀಡುವ ಕಾಂಗ್ರೆಸ್ ಸರಕಾರದ ನೀತಿ ಖಂಡನೀಯವಾಗಿದೆ.

ಪ್ರಜಾಪ್ರಭುತ್ವದ ಮುನ್ನಡೆಯಲ್ಲಿ ಕೇರಳ

(೫ನೇ ಪುಟದಿಂದ)

ರೂ. 4,18,000 ವೆಚ್ಚದ ಅಣೆ ಕಟ್ಟು

ಕಾಸರಗೋಡು ತಾಲೂಕಿನ ಹೊಸದುರ್ಗದ ಬಳಿ ಇರುವ ಮದಿರಕ್ಕಾಡುವಿನಲ್ಲಿ ಚಿತರೀ ಹೊಳೆಗೆ ಆಣೆಕಟ್ಟೊಂದನ್ನು ಕಟ್ಟಲು ಕೇರಳ ಸರಕಾರವು ಮಂಜೂರಾತಿಯನ್ನು ಇತ್ತಿದೆ. ಇದಕ್ಕೆ ತಗಲುವ ವೆಚ್ಚ ಸುಮಾರು ರೂ. 4,18,000ಗಳು. ಕಟ್ಟುವ ಕಾರ್ಯವು ಬರುವ ಡಿಸೆಂಬರ್ ತಿಂಗಳಿನಿಂದ ಆರಂಭವಾಗುವುದು.

ಹೊಸ ಕಾನೂನುಗಳೆರಡು

ಕೇರಳದ ಕಾನೂನು ಸಚಿವರಾದ ಶ್ರೀ ಕೃಷ್ಣ ಐಯರ್‌ರವರು ರಾಷ್ಟ್ರಾಧ್ಯಕ್ಷರ ಸಹಿಗೆ ತೆರುಳಿರುವ ಎರಡು ಹೊಸ ಕಾನೂನುಗಳ ಬಗ್ಗೆ ಕೇಂದ್ರದ ಗೃಹ ಮಂತ್ರಿ ಶ್ರೀ ಜಿ. ಬಿ. ಪಂತರೊಡನೆ ಮಾತುಕತೆ ನಡೆಸಿದರು. ಮಾತುಕತೆಗಳು ಮುಗಿದ ಬಳಿಕ ಸಚಿವರು "ಹೈಕೋರ್ಟು ಮಸೂದೆ ಮತ್ತು ವ್ಯಾವಸಾಯಿಕ ಋಣ ಮುಕ್ತಿ ಮಸೂದೆಗಳು ರಾಷ್ಟ್ರಾಧ್ಯಕ್ಷರ ಸಹಿ ಪಡೆಯುವುದು ಅಷ್ಟೇನು ಕಷ್ಟದ್ದಾಗಿಲ್ಲ" ವೆಂದು ತಿಳುಹಿಸಿದರು.

ಎರಡನೆಯ ಕಾನೂನಿನಿಂದ ಕೇರಳದ ರೈತರಿಗೆ ಹೆಚ್ಚು ಪ್ರಯೋಜನ ದೊರೆಯಲಿದೆ.

"ಸಮರ್ಥ ಆಡಳಿತೆ"

ಕೇಂದ್ರ ಸಮಾಜಾಭಿವೃದ್ಧಿ ಸಮಿತಿಯ ಅಧ್ಯಕ್ಷಣಿಯಾದ ಶ್ರೀಮತಿ ದುರ್ಗಾಬಾಯಿ ದೇಶಮುಖರವರು ಬಳ್ಳಾರಿಯಲ್ಲಿ ಪತಿತ ಮಹಿಳಾಶ್ರಮವೊಂದರ ಆರಂಭೋತ್ಸವ ನಡೆಸುತ್ತ ಕೇರಳದಲ್ಲಿಯ ಇಂಥ ಆಶ್ರಮಗಳನ್ನು ಪ್ರಶಂಸಿದರು. "ಕೇರಳದಲ್ಲಿ ಸಮಾಜಾಭಿವೃದ್ಧಿ ಕೇಂದ್ರಗಳೂ ಪತಿತ ಮಹಿಳಾಶ್ರಮಗಳೂ ಅತ್ಯಂತ ಸಮರ್ಥ ರೀತಿಯಲ್ಲಿ ನಡೆಸಲ್ಪಡುತ್ತಿವೆ. ದೇಶದ ಯಾವ ಭಾಗದಲ್ಲೂ ಇಷ್ಟು ಸಮರ್ಥ ರೀತಿಯ ಆಡಳಿತವಿಲ್ಲ" ಎಂದೂ ಅವರು ಹೇಳಿದರು.

ಹಡಗು ನಿರ್ಮಾಣ ಕೇಂದ್ರದ ಸ್ಥಾಪನೆ

ಕೇರಳ ಶಾಸನ ಸಭೆಯು ಕಮ್ಯೂನಿಸ್ಟ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಇ. ಗೋಪಾಲಕೃಷ್ಣ ಮೆನನ್‌ರವರು ಮಂಡಿಸಿದ ಆ ಮೇಲೆ ಸಭೆಯ ಎಲ್ಲ ವರ್ಗಗಳಿಂದಲೂ ಉತ್ಸಾಹದಿಂದ ಅಂಗೀಕರಿಸಲ್ಪಟ್ಟ ಅಸೆಂಬ್ಲಿ ನಿರ್ಣಯದ ಪ್ರಕಾರ ಕೊಚ್ಚೀನ್ನಲ್ಲಿ ಎರಡನೆಯ ಹಡಗು ನಿರ್ಮಾಣದ ಕೇಂದ್ರವು ಸ್ಥಾಪನೆಯಾಗುವದು.

ಕಾಂಗ್ರೆಸ್ ಸದಸ್ಯರಾದ ಶ್ರೀ ಎ. ಎಲ್. ಜೇಕಬ್‌ರವರು ಮಾತನಾಡಿ ಕೇರಳದಲ್ಲಿ ನಿರುದ್ಯೋಗ ನಿವಾರಣೆಗಾಗಿ ಎರಡನೆಯ ನೌಕಾ ನಿರ್ಮಾಣ ಕೇಂದ್ರವನ್ನು ಕೊಚ್ಚೀನ್‌ನಲ್ಲಿ ಸ್ಥಾಪಿಸುವುದು ಆಗತ್ಯವಾಗಿದೆ ಎಂದು ಸಂಪೂರ್ಣ ಬೆಂಬಲವನ್ನಿತ್ತರು. ಶ್ರೀಗಳಾದ ಸಿ.ಹೆಚ್. ಮಹಮ್ಮದ್ ಕೋಯ್ (ಮುಸ್ಲಿಂ ಲೀಗ್), ಎಂ. ನಾರಾಯಣ ಕುರೂಪ್ (ಪಿ. ಎಸ್. ಪಿ.) ಇವರುಗಳೂ ತಮ್ಮ ಹೃತ್ಪೂರ್ವಕ ಬೆಂಬಲ ನೀಡಲು ಹಿಂದುಳಿಯಲಿಲ್ಲ.

ಏರುತ್ತಿರುವ ಜನಸಂಖ್ಯೆಯ ಹತೋಟಿ

ಕಳೆದ ಒಂದೇ ಒಂದು ಸಾಲಿನಲ್ಲಿ (1957–58) ಕೇರಳದ ಜನಸಂಖ್ಯೆ 2,52,000ರಷ್ಟು ಮೊದಲಿನಕ್ಕಿಂತ ಹೆಚ್ಚಾಗಿದೆಯೆಂದು ಮುಖ್ಯ ಮಂತ್ರಿ ಶ್ರೀ ಇ. ಎಂ. ಎಸ್.ರವರು ಪ್ರಶ್ನೆಯೊಂದಕ್ಕೆ ಉತ್ತರ ಕೊಡುತ್ತ ತಿಳುಹಿಸಿದ್ದಾರೆ. ಮಿತಿಮೀರಿದ ಜನನಗಳನ್ನು ತಡೆಗಟ್ಟಲು ರಾಜ್ಯದಲ್ಲಿ ಈಗಾಗಲೇ 34 ಕುಟುಂಬ ಯೋಜನಾ ಕೇಂದ್ರಗಳು ತೆಗೆಯಲ್ಪಟ್ಟಿವೆ. ಇನ್ನೂ 50 ಇಂಥ ಕೇಂದ್ರಗಳನ್ನು ತೆಗೆಯಲಾಗುವುದು ಎಂದೂ ಮುಖ್ಯ ಮಂತ್ರಿಗಳು ತಿಳುಹಿಸಿದ್ದಾರೆ.

° ° •

ಸುಮಾರು 10 ಲಕ್ಷ ಜನರು ತೊಡಗಿರುವ ಕೇರಳದ ಪ್ರಮುಖ ಕೈಗಾರಿಕೆಯಾದ ಹಗ್ಗದ ಕೈಗಾರಿಕೆಯ ದುಸ್ಥಿತಿಯನ್ನು ಹೋಗಲಾಡಿಸಲು ಕೇಂದ್ರಸರಕಾರದ ನೆರವಿನಿಂದ ಸೆಂಟ್ರಲ್ ಕಾಯರ್ ಟ್ರೇಡಿಂಗ್ ಕಾರ್ಪೋರೇಷನ್ನನ್ನು ವ್ಯವಸ್ಥೆಗೊಳಿಸುವ ಗೊತ್ತುವಳಿಯನ್ನು ಉದ್ಯೋಗ ಮಂತ್ರಿ ಕೆ. ಪಿ. ಗೋಪಾಲನ್‌ರವರು ಮಂಡಿಸಿದರು. ಶಾಸನ ಸಭೆಯು ಇದಕ್ಕೆ ಒಪ್ಪಿಗೆಯನ್ನು ನೀಡಿ ರೂ. 27,52,300ಗಳ ಮಂಜೂರಾತಿಯನ್ನಿತ್ತಿದೆ.

ದೊಡ್ಡಬಳ್ಳಾಪುರ—

ಡಾ|| ಗೋರಿ 'ಜನಶಕ್ತಿ'ಯನ್ನು ಹರಿದು ಹಾಕಿದರು

ಇವರ ಡಾಕ್ಟರ್ ವೃತ್ತಿಯ ಬಗ್ಗೆ

ಸಾರ್ವಜನಿಕ ವಿಚಾರಣೆ ನಡೆಯಲಿ ಎನ್ನುತ್ತಾರೆ ಜನ !

ತಾ. 13-7-1958ನೇ 'ಜನಶಕ್ತಿ' ಸಂಚಿಕೆಯನ್ನು ಓದಿಸಿ ಕೇಳಿದ ಡಾ|| ಗೋರಿಯವರು ತಮ್ಮ ವರ್ತನೆಯ ಬಗ್ಗೆ ನಾಚಿಕೆಪಟ್ಟುಕೊಂಡು ವಿಷಾದಪಡದೆ, ಆಸ್ಪತ್ರೆಯಲ್ಲಿದ್ದ ರೋಗಿಗಳ ಎದುರು 'ಬದ್ಮಾಷ್ ಬಡ್ಡೀ ಮಕ್ಕಳು (ನಾಡೀ ಪರೀಕ್ಷೆ ಇಲ್ಲ ಜೇಬು ಪರೀಕ್ಷೆ ನಡಿಯುತ್ತಿದೆ ಎಂದು) ಹಾಕಿಸಿದ್ದಾರೆ. ಇಂತಹವರನ್ನು ಒದೀಬೇಕು' ಎಂದು ವೀರಾವೇಶದಿಂದ ಪತ್ರಿಕೆಯನ್ನು ಕಾಲಿನಲ್ಲಿ ತುಳಿದು, ಸುದ್ದಿಯನ್ನು ಪತ್ರಿಕೆಯಲ್ಲಿ ಹಾಕಿಸಿದ ನಾಗರಿಕರನ್ನು ಸಿಕ್ಕಾಬಟ್ಟೆ ಬೈದರಂತೆ.

ತಮ್ಮ ವಿಷಯದಲ್ಲಿ ಜನರು ಆರೋಪಣೆ ಮಾಡಿದರೆ ಅದರ ಬಗ್ಗೆ ಹೇಗೆ ನಡೆದುಕೊಳ್ಳಬೇಕು ಎಂಬ ತಿಳುವಳಿಕೆ ಕೂಡ ಇಲ್ಲದೆ ಇರುವ ಡಾ|| ಗೋರಿಯವರಿಗೆ ಧಿಕ್ಕಾರವಿರಲಿ. ಇಡೀ ತಾಲ್ಲೂಕಿನ ಹಾಗೂ ಟೌನಿನ ಜನರು (ಕೆಲವು ಕಾಂಗ್ರೆಸ್ ಭಕ್ತರನ್ನು ಬಿಟ್ಟು) ಇವರ ಡಾಕ್ಟರ್ ಕೆಲಸದ ಬಗ್ಗೆ ಬೇಸತ್ತು ಇವರ ವಿಷಯದಲ್ಲಿ ಸಿಕ್ಕಾಬಟ್ಟೆ ಮಾತನಾಡಿಕೊಳ್ಳುತ್ತಿರುವುದಲ್ಲದೆ 'ಇವರು ಇಲ್ಲಿಂದ ಯಾವಾಗ ಹೋದಾರಪ್ಪಾ' ಎಂದು ಬೇಜಾರುಪಟ್ಟುಕೊಂಡಿದ್ದರೂ, ಇವರು ಸತ್ಯ ಹರಿಶ್ಚಂದ್ರನಂತೆ ವರ್ತಿಸಿಕೊಳ್ಳುತ್ತಿರುವುದು ನಾಗರಿಕರಿಗೆ ವಿಸ್ಮಯವನ್ನುಂಟುಮಾಡಿದೆ.

ಇವರಿಗಿಂತ ಹಿಂದೆ ಇದೇ ಆಸ್ಪತ್ರೆಯಲ್ಲಿದ್ದ ಡಾ|| ಪಾರ್ಥಸಾರಥಿಯವರನ್ನು ಇಡೀ ತಾಲ್ಲೂಕಿನ ಜನತೆ ಇಂದಿಗೂ ಅವರ ಸೇವೆಯನ್ನು ಮರೆಯದೆ ಕೊಂಡಾಡುತ್ತಿರುವಾಗ ಡಾ|| ಗೋರಿಯವರು ಜನತೆಯು ಮಾಡಿರುವ ಆರೋಪಣೆ ಬಗ್ಗೆ ವಿಷಾದಪಟ್ಟುಕೊಂಡು ತಮ್ಮ ಕೆಲಸವನ್ನು ಸರಿಯಾಗಿ ಮಾಡಬೇಕಾದ್ದು ಅವರ ಕರ್ತವ್ಯ. ದೊಡ್ಡಬಳ್ಳಾಪುರ ತಾಲ್ಲೂಕಿನ ಜನತೆ ಅಧಿಕಾರಿಗಳ ಸೇವೆಯನ್ನು ತಿಳಿಯದ ಮೂರ್ಖರಲ್ಲ. ಡಾ|| ಗೋರಿಯವರು ಹಾಗೂ ಹೀಗೂ ಕೆಲವು ಮುಖಂಡರನ್ನು ಹೊಗಳಿಕೊಂಡು ದರ್ಬಾರ್ ನಡೆಸುವುದನ್ನು ಬಿಟ್ಟು ಇನ್ನಾದರೂ ತಮ್ಮ ಕರ್ತವ್ಯವನ್ನು ಸರಿಯಾಗಿ ಮಾಡಿಯಾರೆ ಎಂದು ಜನರು ನಿರೀಕ್ಷಿಸುತ್ತಿದ್ದಾರೆ. ಒಂದು ವೇಳೆ ಮೇಲ್ಪಟ್ಟ ಅಧಿಕಾರಿಗಳ ಬೆಂಬಲವಿದೆ ಎಂಬ ಜಂಭದಿಂದ ಡಾ|| ಗೋರಿಯವರು ವೀರಾವೇಶ ಹೊಂದಿದರೆ, ಇದು ಮಹಮುದ್ ಗೋರಿ ದಂಡಯಾತ್ರೆಯ ಯುಗವಲ್ಲ, ನಾಗರಿಕರು ಇವರಿಗೆ ತಕ್ಕ ಮರ್ಯಾದೆಯನ್ನು ಕಲಿಸಲು ಸಮರ್ಥರಿದ್ದಾರೆ. ಧೈರ್ಯವಿದ್ದರೆ 'ಜನಶಕ್ತಿ'ಯಲ್ಲಿ ಪ್ರಕಟವಾಗಿರುವ ಇವರ ವಿಷಯದಲ್ಲಿ ಸತ್ಯಾಸತ್ಯದ ಬಗ್ಗೆ ಒಂದು ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಲಿ ಎಂದು ಜನರು ಆಹ್ವಾನಿಸುತ್ತಿದ್ದಾರೆ

ಸಂಘದ ಸದಸ್ಯರಾದ್ದರಿಂದ ಫ್ಯಾಕ್ಟರಿ ಲಾಕೌಟ್

ಐ. ಅಂಡ್ ಜಿ. ಎಂಜಿನಿಯರಿಂಗ್ ಕಂಪೆನಿ ಮಾಲಿಕರ ದೌರ್ಜನ್ಯ

ಬೆಂಗಳೂರು ನಗರದಲ್ಲಿ ಸಣ್ಣ ಪುಟ್ಟ ಇಂಜಿನಿಯರಿಂಗ್ ಕಾರ್ಖಾನೆಗಳಲ್ಲಿ ಸುಮಾರು ೫,೦೦೦–೬,೦೦೦ ಜನ ಕಾರ್ಮಿಕರು ದುಡಿಯುತ್ತಿದ್ದಾರೆ. ಈ ಕಾರ್ಖಾನೆಗಳನ್ನು ನಡೆಸುವ ಮಾಲೀಕರು ನ್ಯಾಯ ಮತ್ತು ಕಾನೂನುಗಳನ್ನು ಕಡೆಗಣಿಸಿ ಕಾರ್ಮಿಕರನ್ನು ತೀವ್ರ ಶೋಷಣೆಗೆ ಒಳಪಡಿಸಿದ್ದಾರೆ. ಫ್ಯಾಕ್ಟರಿ ಕಾನೂನುಗಳಂತೆ ೮ ಗಂಟೆ ಕೆಲಸ, ಓವರ್‌ಟೈಂ ಕೂಲಿ, ಹಕ್ಕಿನ ರಜಾ ಮೊದಲಾದವುಗಳು ಅನೇಕ ಫ್ಯಾಕ್ಟರಿಗಳಲ್ಲಿ ದೊರೆಯುತ್ತಿಲ್ಲ. ಕೆಲಸಕ್ಕೆ ನ್ಯಾಯವಾದ ಕೂಲಿ, ತುಟ್ಟಿ ಭತ್ಯ, ರಜಾ, ಬೋನಸ್ ಯಾವುದೂ ದೊರೆಯುವುದಿಲ್ಲ. ಕಾನೂನುಗಳನ್ನು ಜಾರಿಗೆ ತರುವುದಕ್ಕಾಗಿ ನೇಮಿಸಿರುವ ಫ್ಯಾಕ್ಟರಿ ಇನ್ಸ್‌ಪೆಕ್ಟರ್ ಸಾಹೇಬರು ಈ ಕಡೆ ಗಮನ ಕೊಟ್ಟಿಲ್ಲ. ಈ ಬಗ್ಗೆ ಅವರಿಗೆ ದೂರಿತ್ತಲ್ಲಿ ಕಾನೂನು ಅನ್ವಯವಾಗುವ ಬದಲು ಕಾರ್ಮಿಕರ ಮೇಲೆ ಜುಲ್ಮು ಹೆಚ್ಚಿರುವ ನಿದರ್ಶನಗಳೂ ಉಂಟು

ಕಳೆದ ತಿಂಗಳು ಮಲ್ಲೇಶ್ವರದಲ್ಲಿರುವ ಇಂಡಸ್ಟ್ರಿಯಲ್ ಅಂಡ್ ಜನರಲ್ ಇಂಜಿನಿಯರಿಂಗ್ ಕಂಪೆನಿಯ ೩೫ ಜನ ಕಾರ್ಮಿಕರು ತಮ್ಮ ಕೆಲಸ ಮತ್ತು ಜೀವನ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು ಬೆಂಗಳೂರು ಜಿಲ್ಲಾ ಇಂಜಿನಿಯರಿಂಗ್ ಕೆಲಸಗಾರರ ಸಂಘದ ಸದಸ್ಯರಾದರು. ಈ ವಿಚಾರ ತಿಳಿದು ಮಾಲೀಕರು ಕಾರ್ಮಿಕರಿಗೆ ಪಾಠ ಕಲಿಸಲು ಕಾರ್ಖಾನೆಯ ಬಾಬಿನ್ ಸೆಕ್ಷನನ್ನು ಕಾರ್ಮಿಕರಿಗೆ ನೋಟೀಸ್ ಕೊಡದೆ ೩—೬—೫೮ರಂದು ಮುಚ್ಚಿದರು. ಈ ಅನ್ಯಾಯವನ್ನು ಬೇರೆ ಸೆಕ್ಷನ್ನಿನ ಕಾರ್ಮಿಕರು ಪ್ರತಿಭಟಿಸಿದ ಸಲುವಾಗಿ ಮಾಲೀಕರು ಇಡೀ ಫ್ಯಾಕ್ಟರಿಯನ್ನು ಲಾಕೌಟ್ ಮಾಡಿದರು. ಅಲ್ಲಿನ ಕಾರ್ಮಿಕರು ಈ ಅಕ್ರಮ ಲಾಕೌಟ್ ಹಾಗೂ ಅನ್ಯಾಯದ ವಿರುದ್ಧ ಈ ತಿಂಗಳು ೪—೬—೫೮ರಿಂದ ಸತ್ಯಾಗ್ರಹ ಹೂಡಿದ್ದಾರೆ.

ಈ ಬಗ್ಗೆ ಅಸಿಸ್ಟೆಂಟ್ ಲೇಬರ್ ಕಮಿಶನರ್‌ರವರು ನಡೆಸಿದ ರಾಜಿ ಸಂಧಾನ ಮಾಲೀಕರ ದುರುದ್ದೇಶಪೂರಿತ ಮೊಂಡುತನದಿಂದಾಗಿ ಮುರಿದುಬಿತ್ತು.

ಮಾಲೀಕ ಶ್ರೀ ವಿಶ್ವೇಶ್ವರಯ್ಯನವರು ತಾವು ಹಿಂದೆ ಮೈಸೂರು ಸರ್ಕಾರದ ಸೆಕ್ರಟರಿಯಾಗಿದ್ದರೆಂದೂ, ತಾವು ಸರ್ಕಾರದಲ್ಲಿ ಬಹಳ ಪ್ರಭಾವ ಹೊಂದಿರುವುದಾಗಿಯೂ ಹೇಳಿಕೊಂಡು ಕಾರ್ಮಿಕರನ್ನು ಬೆದರಿಸುತ್ತಿದ್ದಾರೆ. ಈಗಿರುವ ಕಾರ್ಮಿಕರನ್ನೆಲ್ಲಾ ಓಡಿಸಿ, ಬೇರೆ ಕೆಲಸಗಾರರನ್ನು ನೇಮಿಸಿಕೊಳ್ಳಲು ಅವರಿಗೆ ಮೂಲಭೂತ ಹಕ್ಕಿದೆಯಂತೆ !

ಕಾರ್ಮಿಕರ ಮೂಲಭೂತ ಸಂಘಟನಾ ಹಕ್ಕುಗಳಿಗಾಗಿಯೂ, ತಮ್ಮ ಜೀವನದ ಮತ್ತು ಕೆಲಸದ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಳ್ಳಲು ಹೋರಾಟ ನಡೆಸುತ್ತಿರುವ ಕಾರ್ಮಿಕರಿಗೆ ಎಲ್ಲಾ ಕಾರ್ಮಿಕ ಸಂಘಗಳೂ, ನಾಗರೀಕರೂ ಉದಾರ ಧನ ಹಾಗೂ ಎಲ್ಲಾ ತೆರನಾದ ಸಹಾಯ ನೀಡಬೇಕೆಂದೂ, ಸರ್ಕಾರ ಇಂಡಿಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್‌ನ ನಿಯಮಗಳಂತೆ ಈ ಕೂಡಲೇ ಲಾಕೌಟನ್ನು ಬಹಿಷ್ಕರಿಸಿ ಕಾರ್ಖಾನೆ ತೆರೆಯಬೇಕೆಂದು ಆಜ್ಞೆ ಹೊರಡಿಸುವಂತೆ ಒತ್ತಾಯಪಡಿಸಬೇಕೆಂದು ಸಂಘವು ಮನವಿ ಮಾಡಿಕೊಳ್ಳುತ್ತಿದೆ.

ಈ ಕೂಡಲೇ ಕಾನೂನಿನ ನಡವಳಿಕೆಯನ್ನು ಮಾಲೀಕರ ಮೇಲೆ ನಡೆಸಿ ಕಾರ್ಮಿಕರ ನ್ಯಾಯ ಹಾಗೂ ಕಾನೂನುಬದ್ಧವಾದ ಮೂಲಭೂತ ಸಂಘಟನಾ ಹಕ್ಕಿನ ರಕ್ಷಣೆ ಮಾಡಬೇಕೆಂದು ಸಂಘವು ಕರೆಕೊಟ್ಟಿದೆ.

ನೀವೇನು ಹೇಳುತ್ತೀರಿ ?

(೬ನೇ ಪುಟದಿಂದ)

ಧೀ ಪಕ್ಷ. ಕೇರಳದಲ್ಲಿ ಪಿ. ಎಸ್. ಪಿ.ಯೊಂದಿಗೆ ಕಾಂಗ್ರೆಸ್ ಸೇರಿಕೊಂಡಿತು.

★ ಬಿಹಾರದಲ್ಲಿ ಜಾರಖಂಡ ಪಕ್ಷದೊಡನೆ ಸೆಣಸಾಡುತ್ತಿರುವ ಕಾಂಗ್ರೆಸ್ಸು ಓರಿಸ್ಸಾದಲ್ಲಿ ಆ ಪಕ್ಷದೊಂದಿಗೆ ಸ್ನೇಹಸಂಧಾನ ಮಾಡಿಕೊಂಡಿದೆ.

ಅಧಿಕಾರದ ಆಶೆಬುರುಕುತನ ತುಂಬಿದ ಅಪವಿತ್ರ ಮೈತ್ರಿಯ ಯೋಚನೆಯಿಲ್ಲದೆ ಸಂಧಿಸಾಧಕವಾಗಿರುವ ಕಾಂಗ್ರೆಸ್ಸಿನ ಈ ಸ್ಥಿತಿಯ ಬಗ್ಗೆ ಏನು ಹೇಳುತ್ತೀರಿ ? ಕಾಂಗ್ರೆಸ್ ಮಹಲು ಯಾವ ಮರಳಿನ ಮೇಲೆ ನಿಲ್ಲುತ್ತಿದೆ ?

೦ ೦ ೦

ಹೈದರಾಬಾದ ಪತ್ರಿಕಾ ಕಛೇರಿಯೊಂದರ ಸುದ್ದಿಯಿದು.

ಪತ್ರಿಕೆಯ ಮಾಲೀಕರು ತಮ್ಮ ಕೆಲಸಗಾರನೊಬ್ಬ ಉದ್ಯೋಗ ವಿವಾದವೊಂದರಲ್ಲಿ ಸಾಕ್ಷಿ ಹೇಳುವ ಧೈರ್ಯ ತೋರಿಸಿದುದರಿಂದ ಪೋಲಿಸರಿಗೆ ಸುಳ್ಳು ದೂರೊಂದನ್ನಿತ್ತು ಆ ಕೆಲಸಗಾರನ ದಸ್ತಗಿರಿಯಾಗುವಂತೆ ಮಾಡಿದರು.

ಹಿಂದೀ 'ಮಿಲಾಪ್' ಪತ್ರಿಕೆಯ ಕಾರ್ಯನಿರತ ಪತ್ರಿಕೋದ್ಯಮಿಗಳನ್ನು ಕೆಲಸದಿಂದ ತೆಗೆದುಹಾಕಿದ ಬಗ್ಗೆ ಲೇಬರ್ ಕೋರ್ಟಿನಲ್ಲಿ ವಿಚಾರಣೆ ನಡೆದಿತ್ತು. 'ಮಿಲಾಪ್' ಪತ್ರಿಕೆಯ ಇನ್ನೊಬ್ಬ ಕೆಲಸಗಾರ ಕೋರ್ಟಿಗೆ ಬಂದು ಕಾರ್ಯನಿರತ ಪತ್ರಿಕೋದ್ಯಮಿಗಳ ಪರವಾಗಿ ಸಾಕ್ಷಿ ನುಡಿದ.

ಸಾಕ್ಷಿ ನುಡಿದು ಆತ ಕಛೇರಿಗೆ ಹೋದಾಗ ವ್ಯವಸ್ಥಾಪಕ ಸಂಪಾದಕರು ಫೋನ್ ಮೂಲಕ ಪೋಲೀಸರನ್ನು ಕರೆ ಕಳುಹಿಸಿದರು. ಕಳವಿನ ಆರೋಪದ ಮೇಲೆ ಆ ಕೆಲಸಗಾರನನ್ನು ದಸ್ತಗಿರಿ ಮಾಡಿ ಕಸ್ಟಡಿಯಲ್ಲಿಡಲಾಯಿತು.

ಮೂರು ಗಂಟೆಗಳ ವರೆಗೆ ಆತನನ್ನು ಕಸ್ಟಡಿಯಲ್ಲಿಟ್ಟುಕೊಂಡು ಆತನ ಮೇಲಿರುವುದು ಸುಳ್ಳು ದೂರು ಎಂದು ತಿಳಿದ ಬಳಿಕ ಬಿಟ್ಟುಬಿಟ್ಟರು.

ಮೊಸಳೆ ಕಣ್ಣೀರಿನಿಂದ ಹಸಿವೆಯ ಬೆಂಕಿ ಆರಲಾರದು

(೨ನೇ ಪುಟದಿಂದ)

ವಲ್ಲಿ ರೈತರಿಂದ ಕಡಿಮೆ ಬೆಲೆಗೆ ದಾಸ್ತಾನುಗಾರರು ಖರೀದಿ ಮಾಡಿ ಈಗ ಅಧಿಕ ಬೆಲೆಗೆ ಧಾನ್ಯಗಳನ್ನು ಮಾರಿ ಜನತೆಯನ್ನು ಸುಲಿಯುತ್ತಿದ್ದಾರೆ. ಈ ಸಮಾಜ ವಿರೋಧಿಗಳ ಬಗ್ಗೆ ಸರಕಾರ ಪರೋಕ್ಷವಾಗಿ ಪ್ರೋತ್ಸಾಹ ನೀಡುತ್ತಿದೆ. ದೊಡ್ಡ ಸಾಹುಕಾರರು ಮತ್ತು ಜಮೀನ್ದಾರರಲ್ಲಿರುವ ದಾಸ್ತಾನನ್ನು ಸರಕಾರ ವಶಪಡಿಸಿಕೊಂಡು ಅಗ್ಗ ದರದಂಗಡಿಗಳಲ್ಲಿ ಸರಕಾರವೇ ಜನತೆಗೆ ಕಡಿಮೆ ಬೆಲೆಗೆ ಆಹಾರವನ್ನೊದಗಿಸಲು ಕ್ರಮ ತೆಗೆದುಕೊಳ್ಳಬೇಕೆಂದು ದಕ್ಷಿಣ ಕನ್ನಡ ಜಿಲ್ಲೆಯ ಕಮ್ಯೂನಿಸ್ಟ್ ಪಾರ್ಟಿ ಈಗಾಗಲೇ ಒತ್ತಾಯಪಡಿಸಿರುತ್ತದೆ. ಇದನ್ನು ಎಲ್ಲ ಕಡೆಗಳಲ್ಲೂ ಮಾಡುವುದಗತ್ಯವೆಂದು ನಾವು ಒತ್ತಾಯಪಡಿಸುತ್ತೇವೆ.

ಮೊಸಳೆ ಕಣ್ಣೀರಿಟ್ಟಂತೆ

ಬೆಲೆ ಏರಿಕೆಯಿಂದ ಜನತೆ ತೀವ್ರ ಕಳವಳಗೊಂಡಿದೆ. ಸರಕಾರಕ್ಕೆ ಇದು ತಿಳಿದಿಲ್ಲವೆಂದಲ್ಲ. ಆಹಾರದ ಅಭಾವವಿದೆಂದೂ ಮಂತ್ರಿಗಳು ಮೇಲಿಂದ ಮೇಲೆ ಹೇಳುತ್ತಿದ್ದಾರೆ ಮತ್ತು ಹೆಚ್ಚು ಬೆಳೆಯಬೇಕೆಂದೂ ಉಪದೇಶ ಮಾಡುತ್ತಿದ್ದಾರೆ. ಮೊನ್ನೆ ತಾನೇ ರಾಷ್ಟ್ರಾಧ್ಯಕ್ಷರು ಸಹ ಹೈದರಾಬಾದಿನಲ್ಲಿ ಮಾತಾಡುತ್ತಾ ಆಹಾರೋತ್ಪಾದನೆಗೆ ಅಗ್ರಸ್ಥಾನ ಕೊಡಬೇಕೆಂದು ಹೇಳಿದ್ದಾರೆ. ದೊಡ್ಡ ನೀರಾವರಿ ಮತ್ತು ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಪ್ರೋತ್ಸಾಸ ಕೊಡಬೇಕೆಂದೂ ಆಹಾರ ಮಂತ್ರಿಗಳ ಸಭೆಗಳಲ್ಲಿ ತೀರ್ಮಾನಗಳಾಗಿವೆ. ಆಹಾರೋತ್ಪಾದನೆಗೆ ಪ್ರೋತ್ಸಾಹ ನೀಡಲು ಭೂಸುಧಾರಣೆ ಅವಶ್ಯವೆಂದೂ ರಾಜ್ಯ ಸರಕಾರಗಳು ಕೈಗೊಳ್ಳದಿದ್ದು ಅದು ಕೂಡಲೇ ಜಾರಿಗೆ ಬರುವಂತೆ ಮಾಡಲು ಕಾಂಗ್ರೆಸ್ ಹೈಕಮಾಂಡ್‌ನವರು ಒಂದು ಉಚ್ಚಮಟ್ಟದ ತ್ರಿಮೂರ್ತಿ ಸಮಿತಿಯನ್ನೂ ಈಗ ನೇಮಿಸಿದೆ. ಜಮೀನ್ದಾರರ ಪ್ರಭಾವವಿರುವ ಕಾಂಗ್ರೆಸ್ ಸರಕಾರಗಳು ಈ ಸುಧಾರಣೆಗಳನ್ನು ಎಷ್ಟರಮಟ್ಟಿಗೆ ಕಾರ್ಯಗತಗೊಳಿಸುತ್ತವೆಂಬುದನ್ನು ನೋಡಬೇಕಾಗಿದೆ. ಇದೆಲ್ಲಾ ಮೊಸಳೆ ಕಣ್ಣೀರಿಟ್ಟಂತೆಯೇ ಎಂಬುದು ನಮ್ಮ ಅನುಭವ.

ಈಗ ಮತ್ತು ಮುಂದೆ ಮಾಡಬೇಕಾದುದು

ಬೆಲೆ ಏರಿಕೆಯನ್ನು ತಡೆಗಟ್ಟಲು ಕೂಡಲೇ ಸರಕಾರ ಕ್ರಮ ತೆಗೆದುಕೊಳ್ಳುವುದಗತ್ಯ. ಅದಕ್ಕೆ ಎಲ್ಲ ಪಾರ್ಟಿ ಘಟಕಗಳೂ, ಸಾಮೂಹಿಕ ಸಂಘಟನೆಗಳೂ ಒತ್ತಾಯ ತರಬೇಕಾಗಿದೆ. ಸರಕಾರ ಕೂಡಲೇ ಈ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತೇವೆ:

1) ಅಗ್ಗ ದರದ ಅಂಗಡಿಗಳನ್ನು ತೆರೆದು ಕಡಿಮೆ ದರದಲ್ಲಿ ಸರಕಾರ ಆಹಾರ ಧಾನ್ಯಗಳನ್ನು ಜನತೆಗೆ ಒದಗಿಸುವುದು.

2) ಸಾಹುಕಾರರು ಮತ್ತು ಜಮೀನ್ದಾರರಲ್ಲಿರುವ ದಾಸ್ತಾನುಗಳನ್ನು ವಶಪಡಿಸಿಕೊಳ್ಳುವುದು.

3) ಎಲ್ಲ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡ ಆಹಾರ ಸಮಿತಿಗಳನ್ನು ಎಲ್ಲ ಘಟ್ಟಗಳಲ್ಲೂ ರಚಿಸುವುದು.

4) ಪ್ರಗತಿಗಾಮಿಯಾದ ಭೂಸುಧಾರಣೆಯನ್ನು ಕೂಡಲೇ ಜಾರಿಗೆ ತರುವುದು.

5) ಸಾಗುವಳಿಗೆ ಯೋಗ್ಯವಾದ ಬಂಜರು ಜಮೀನನ್ನು ಜಮೀನಿಲ್ಲದವರಿಗೆ ಹಂಚುವುದು.

6) ಸಣ್ಣ ನೀರಾವರಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಸಹಾಯ ಕೊಡುವುದು.

ಈಗ ಬಂಜರು ಜಮೀನಿಗೆ ರೈತರು ಅರ್ಜಿ ಹಾಕಿದರೆ ವರ್ಷಗಟ್ಟಲೆ ಕಚೇರಿಗಳಿಗೆ ಅಲೆಯಬೇಕಾಗಿದೆ. ಜಮೀನುಗಳನ್ನು ರೈತರಿಗೆ ಕೊಡುವ ಬದಲು ದೊಡ್ಡ ದೊಡ್ಡ ಜಮೀನ್ದಾರರುಗಳೇ ವಶಪಡಿಸಿಕೊಳ್ಳುತ್ತಿದ್ದಾರೆ.

ಸಣ್ಣ ನೀರಾವರಿಗೆ ಪ್ರೋತ್ಸಾಹ ಕೊಡುವ ಸರಕಾರ ಬಾವಿ ತೋಡಿಸಲು 250 ರೂ. ಸಹಾಯ ಮತ್ತು 750 ಸಾಲದ ರೂಪದಲ್ಲಿ ಕೊಡುತ್ತಿದೆ. ಇದರಿಂದ ಬಾವಿ ತೋಡಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಹೆಚ್ಚಿನ ಸಹಾಯ ಅಗತ್ಯ. ಕೆರೆಗಳ ದುರುಸ್ತಿಗೂ ಹೆಚ್ಚಿನ ಗಮನ ಅವಶ್ಯ. ಕಮ್ಯೂನಿಸ್ಟ್ ಪಾರ್ಟಿ ಸದಸ್ಯರು ಆಯಾ ಪ್ರದೇಶಗಳಲ್ಲಿ ಈ ಸಮಸ್ಯೆಗಳ ಬಗ್ಗೆ ರಚನಾತ್ಮಕ ಸಲಹೆಗಳನ್ನು ಕೊಟ್ಟು ಸರಕಾರಕ್ಕೆ ಒತ್ತಾಯ ತರಬೇಕೆಂದು ನಾವು ಕೇಳಿಕೊಳ್ಳುತ್ತೇವೆ.

——

ಬೆಂಗಳೂರು—

ಗ್ರಿಂಡ್ಲೇಸ್ ಬ್ಯಾಂಕ್ ನೌಕರರ ವಾರ್ಷಿಕ ಸಭೆ

ನೇಷನಲ್ ಓರ್‌ವಸೀಸ್ ಅಂಡ್ ಗ್ರಿಂಡ್ಲೇಸ್ ಬ್ಯಾಂಕ್ ನೌಕರರ ಸಂಘದ ದ್ವಿತೀಯ ಸರ್ವಸದಸ್ಯರ ವಾರ್ಷಿಕ ಮಹಾಸಭೆಯು ತಾ. 5-7-58ರಂದು ತನ್ನೆಲ್ಲ ಸದಸ್ಯರೊಡನೆ ಸೇರಿತ್ತು. ಸಭೆಯು ಬರುವ ಆರ್ಥಿಕ ವರುಷ 1958-59ಕ್ಕೆ ಕೆಳಗಿನ ಅಧಿಕಾರಿ ವರ್ಗವನ್ನು ಚುನಾಯಿಸಿತು: ಕೆ. ಸುರಾಜ್ ನಾರಾಯಣ ವ್ಯಾಸ್ (ಅಧ್ಯಕ್ಷರು), ಬಿ. ಧರ್ಮರಾಜ್ (ಉ. ಅಧ್ಯಕ್ಷರು), ಟಿ. ಎಸ್. ವೆಂಕಟಾಚಲಂ (ಕಾರ್ಯದರ್ಶಿ) ಮತ್ತು ಎಂ. ನೀಲಕಂಠ (ಖಜಾಂಚಿ).

ಇರಾಕಿನಲ್ಲಿ ಅರಸೊತ್ತಿಗೆಯ ಅಂತಿಮಯಾತ್ರೆ

(ಮೊದಲನೇ ಪುಟದಿಂದ)

ಮತ್ತು ಒಳಸಂಚುಗಳ ಮೇಲೆ ಜಯವನ್ನು ಪಡೆದಿದೆ" ಎಂದು ಸಾರಿದೆ ಅಲ್ಲದೆ, "ನಾವು ನಿಮ್ಮ ಕಡೆಗಿರುವ ನಮ್ಮ ಕರ್ತವ್ಯವನ್ನು ನೆರವೇರಿಸಲು ನಿರ್ಧರಿಸಿದ್ದೇವೆ" ಎಂದು ಆಶ್ವಾಸನೆ ನೀಡಿದೆ.

"ಸರ್ವಶಕ್ತನ ಅನುಗ್ರಹದಿಂದಲೂ ಜನರ ಮತ್ತು ಸೈನಿಕರ ಬೆಂಬಲದಿಂದಲೂ ನಾವು ನಮ್ಮ ದೇಶವನ್ನು ಸಾಮ್ರಾಜ್ಯಶಾಹಿ ಅಧಿಕಾರದಲ್ಲಿ ಇರಿಸಿದ್ದ ಲಂಚುಗುಳಿ ಗುಂಪಿನ ಅಧಿಪತ್ಯದಿಂದ ವಿಮೋಚನೆಗೊಳಿಸಿದ್ದೇವೆ.

"ಸೈನ್ಯವು ನಿಮ್ಮದು. ಅದು ಇಷ್ಟರಲ್ಲೇ ನಿಮ್ಮ ಅಭಿಲಾಷೆಯನ್ನು ಈಡೇರಿಸಿದೆ; ಜನರ ಹಕ್ಕುಗಳ ಮೇಲೆ ಆಟವಾಡುತ್ತಿದ್ದ ಸ್ವೇಚ್ಛಾಧಿಪತಿಗಳನ್ನು ಕೊನೆಗಾಣಿಸಿದೆ. ಅದಕ್ಕೆ ಬೆಂಬಲ ನೀಡುವುದು ನಿಮ್ಮ ಕರ್ತವ್ಯ. ಸೈನ್ಯವನ್ನು ಸಂಘಟಿಸುವುದರ ಮೂಲಕ ಮತ್ತು ಅದನ್ನು ಸಾಮ್ರಾಜ್ಯಶಾಹಿ ಒಳಸಂಚುಗಳಿಂದ ರಕ್ಷಿಸುವುದರ ಮೂಲಕ ಮಾತ್ರ ಜಯವನ್ನು ಸಾಧಿಸಲು ಸಾಧ್ಯವಿರುವುದು.

"ದೇಶದ್ರೋಹಿಗಳ ಮತ್ತು ಲಂಚಗುಳಿ ವ್ಯಕ್ತಿಗಳ ಕುರಿತು ಅಧಿಕಾರಿಗಳಿಗೆ ತಿಳಿಸಬೇಕೆಂದು ಜನರನ್ನು ಕೇಳಿಕೊಳ್ಳುತ್ತೇವೆ. ದೇಶದ ಹಿತದೃಷ್ಟಿಯಿಂದ ಜನರು ಶಾಂತಿ, ಶಿಸ್ತು, ಐಕ್ಯತೆ ಮತ್ತು ಸಹಕಾರದಿಂದರಬೇಕೆಂದು ನಾವು ವಿನಂತಿಸುತ್ತೇವೆ....

"ನಾವು ನಿಮ್ಮ ಸಲುವಾಗಿ ದುಡಿಯುವೆವೆಂಬ ವಿಶ್ವಾಸವಿರಲಿ. ಅಧಿಕಾರವನ್ನು ಜನತೆಯಿಂದ ಸ್ಫೂರ್ತಿಹೊಂದುವ ಸರಕಾರದ ವಶಕ್ಕೆ ಕೊಡಲಾಗುವುದು........

"ಇರಾಕೀ ಐಕ್ಯವನ್ನು ರಕ್ಷಿಸುವ, ಇತರ ಅರಬ್ ದೇಶಗಳೊಂದಿಗೆ ಸೌಹಾರ್ದ ಸಂಬಂಧಗಳನ್ನು ಬೆಳೆಸುವ, ದೇಶದ ಹಿತಕ್ಕೆ ಒಪ್ಪುವಂಥ ಎಲ್ಲ ಒಪ್ಪಂದಗಳನ್ನೂ ಹೊಣೆಗಾರಿಕೆಗಳನ್ನೂ ಪಾಲಿಸುವ ಮತ್ತು ಬಾಂಡುಂಗ್ (ಆಸ್ಯ—ಆಫ್ರಿಕಾ ರಾಷ್ಟ್ರಗಳ) ಸಮ್ಮೇಳನದ ತತ್ವಗಳನ್ನೂ ಸಂಯುಕ್ತ ರಾಷ್ಟ್ರ ಸಂಸ್ಥೆಯ ಶಾಸನವನ್ನೂ ಅನುಸರಿಸುವ ಇರಾಕೀ ಪ್ರಜಾ ರಾಜ್ಯ ಅಸ್ತಿತ್ವದಲ್ಲಿರುವುದು."

ಸ್ವಾಭಾವಿಕವಾಗಿ ಇರಾಕ್‌ನ ಈ ಘಟನೆ ಸಾಮ್ರಾಜ್ಯಶಾಹಿ ವಲಯಗಳಲ್ಲಿ ಗೊಂದಲವನ್ನು ಉಂಟುಮಾಡಿದೆ. ಅಮೇರಿಕದ ಅಧ್ಯಕ್ಷ ಐಸೆನ್ ಹೋವರ್ ಮತ್ತು ಬ್ರಿಟಿಷ್ ಪ್ರಧಾನಿ ಮೆಕ್‌ಮಿಲನ್ ಗಾಬರಿಗೊಂಡು ಅವಸರದ ಗೂಢಾಲೋಚನೆಗಳನ್ನು ಆರಂಭಿಸಿದ್ದಾರೆ. ಇರಾಕ್ ಪ್ರಜಾರಾಜ್ಯ ಚಿರಾಯುವಾಗಲಿ. ಅರಬ್ ಜನತೆಯ ಸ್ವಾತಂತ್ರ್ಯ ಮತ್ತು ಐಕ್ಯತೆ ಜಯಪ್ರದವಾಗಲಿ. ಆಸ್ಯ-ಆಫ್ರಿಕಾ ಜನತೆಗಳ ಸಖ್ಯ ಮತ್ತು ಸಹಕಾರ ಬೆಳೆದು ಬಲಹೊಂದಲಿ. ಇರಾಕ್ ಜನತೆಗೆ ಇದು ನಮ್ಮ ಶುಭಾಶಯ.

ಲೆಬನಾನ್‌ನಿಂದ ಅಮೇರಿಕದ ಸೈನ್ಯ ವಾಪಸಾಗಲಿ

(ಮೊದಲನೇ ಪುಟದಿಂದ)

ಬ್ರಿಟಾನಿನ ಎಡಪಕ್ಷೀಯ ಕಾರ್ಮಿಕ ಪಕ್ಷಗಳಂತು ಅತ್ಯಂತ ತೀಕ್ಷಣವಾಗಿ ಈ ವಿಚಾರದಲ್ಲಿ ಮಾತನಾಡಿವೆ. "ಈಗ ಎರಡು ವರುಷಗಳ ಹಿಂದೆ ಫ್ರಾನ್ಸ್ ಮತ್ತು ಇಂಗ್ಲಂಡುಗಳು ಈಜಿಪ್ಟ್ ಮೇಲೆ ನಡೆಸಿದ ದಾಳಿಗಿಂತ ಇದೇನು ಕಡಮೆಯಲ್ಲ." ಎಂದಿವೆ.

ಇಂಗ್ಲಂಡು ಲೆಬಾನಾನಿನಲ್ಲಿ ಪ್ರವೇಶಿಸಲು ಕಾರಣವೇ ಇಲ್ಲವೆಂದೂ ಜೋರ್ಡಾನ್ ಇರಾಕ್‌ಗಳಲ್ಲಿ ಪ್ರವೇಶಿಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಲ್ಪಟ್ಟಿದೆ.

ಆಂತರಿಕ ವ್ಯವಹಾರ— ಕೈಹಾಕಬೇಡಿ

"ಇರಾಕ್ ಮತ್ತು ಲೆಬನಾನ್‌ಗಳಲ್ಲಿಯ ಇತ್ತೀಚಿಗಿನ ಬೆಳವಣಿಗೆಗಳನ್ನು ಅಂತರ್ಯುದ್ಧವೆಂದು ಕರೆಯಬಹುದು. ಈ ಆಂತರಿಕ ವ್ಯವಹಾರಗಳಲ್ಲಿ ಹೊರದೇಶಗಳು ತಲೆ ಹಾಕಿದರೆ ವಿಶ್ವ ಸಂಗ್ರಾಮದ ವಿಪತ್ತು ಕಾದಿದೆ"

ಎಂದು ಪ್ರಧಾನಿ ನೆಹ್ರೂ ಅಲಹಾಬಾದಿನಲ್ಲಿ ಘೋಷಿಸಿದ್ದಾರೆ.

"ಇರಾಕ್-ಲೆಬನಾನ್‌ಗಳ ಒಳ ವ್ಯವಹಾರದಲ್ಲಿ ನಾವು ಕೈಹಾಕುವುದಿಲ್ಲ. ಆದರೆ ಇದರಿಂದ ನಮಗೆ ಬಹಳ ಆತಂಕವಾಗಿದೆ" ಎಂದ ಪ್ರಧಾನಿ "ರಣಕಹಳೆ ಮೊಳಗುತ್ತಿದೆ. ಜಗತ್ತು ಎತ್ತಸಾಗುತ್ತಿದೆಯೋ ತಿಳಿಯದು. ಜಗತ್ತು ಶಾಂತಿಯನ್ನು ಬಯಸಿರುವಾಗ ಯುದ್ಧದ ಭಯ ಹೆಚ್ಚುತ್ತಿರುವುದು ವಿಚಿತ್ರ" ಎಂದೂ ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

'ಇರಾಕ್‌ಗೆ ಬೆಂಬಲ ನೀಡಿ'

ಸಂಯುಕ್ತ ಅರಬ್ ಗಣರಾಜ್ಯದ ಅಧ್ಯಕ್ಷ ಗಮಾಲ್ ಅಬ್ದೆಲ್ ನಾಸ್ಸೇರ್ "ಇರಾಕಿನ ಮೇಲೆ ಯಾವುದೇ ಬಗೆಯ ಧಾಳಿ ನಡೆದರೆ ಅದು ಸಂಯುಕ್ತ ಅರಬ್ ಗಣರಾಜ್ಯದ ಮೇಲೆಯೇ ನಡೆದ ಧಾಳಿ ಎಂದು ಭಾವಿಸಲಾಗುವುದಲ್ಲದೆ ಅದನ್ನು ತಕ್ಕರೀತಿಯಲ್ಲಿ ಎದುರಿಸಲಾಗುವುದು" ಎಂದು ಎಚ್ಚರಿಸಿದ್ದಾರೆ. ಇರಾಕ್ ಅರಬ್ ಗಣರಾಜ್ಯದ ಹೊಸ ಸದಸ್ಯ ರಾಷ್ಟ್ರವಾಗಿದೆ.

ಇರಾಕಿನ ಹೊಸ ಪ್ರಭುತ್ವಕ್ಕೆ ಸೋವಿಯತ್ ಮನ್ನಣೆ

ಇರಾಕಿನ ಅರಸೊತ್ತಿಗೆಯನ್ನು ಅಂತ್ಯಗೊಳಿಸಿ ಸ್ಥಾಪಿಸಲ್ಪಟ್ಟ ನೂತನ ಗಣರಾಜ್ಯಕ್ಕೆ ಸೋವಿತ್ ಸರಕಾರ ಮನ್ನಣೆ ನೀಡಿರುವದಾಗಿ ಮಾಸ್ಕೋ ರೇಡಿಯೋ ಸಾರಿದೆ.

ಚೀಣದ ನಿರ್ಧಾರ

ಇರಾಕಿನ ನೂತನ ಗಣರಾಜ್ಯಕ್ಕೆ ಮಾನ್ಯತೆ ನೀಡಲು ಜನತಾ ಚೀಣವು ನಿರ್ಧರಿಸಿರುವುದನ್ನು ನವಚೀನಾ ವಾರ್ತಾ ಸಂಸ್ಥೆ ಬಿತ್ತರಿಸಿದೆ.

ಜಪಾನಿನ ವಿರೋಧ

"ಲೆಬನಾನ್ ಮತ್ತು ಇರಾಕ್‌ಗಳ ವಿಷಯ ಆಂತರಿಕ ಸಮಸ್ಯೆ. ಅಮೇರಿಕೆ ಇದರಲ್ಲಿ ಕೈಹಾಕುವುದು ತರವಲ್ಲ ಇದಕ್ಕೆ ನಮ್ಮ ವಿರೋಧವಿದೆ"ಯೆಂದು ಜಪಾನಿನ ಮುಖ್ಯ ಮಂತ್ರಿ ಕಿಷಿಯವರ ಅಭಿಪ್ರಾಯವನ್ನು ಅಮೇರಿಕೆಗೆ ತಿಳುಹಿಸಲು ಟೋಕಿಯೋದಲ್ಲಿರುವ ಅಮೇರಿಕೆಯ ರಾಯಭಾರಿ ಕಛೇರಿಗೆ ಕೇಳಿಕೊಳ್ಳಲಾಗಿದೆ.

ರಾಜ್ಯದ ರಾಜಕೀಯರಂಗ

ಸ್ವಾಮಿಕಾರ್ಯವೊ — ಸ್ವಕಾರ್ಯವೋ ?

ಕೇಂದ್ರ ಸಚಿವರುಗಳಾದ ಕೆ. ಸಿ. ರೆಡ್ಡಿ ಮತ್ತು ಎಂ. ವಿ. ಕೃಷ್ಣಪ್ಪನವರು ಕೆಲವು ದಿನಗಳ ಹಿಂದೆ ಕೋಲಾರ ಜಿಲ್ಲೆಯಲ್ಲಿ ಪ್ರವಾಸ ಮಾಡಿದರು. ಇದರಲ್ಲಿ ಸ್ವಾಮಿಕಾರ್ಯಕ್ಕಿಂತ ಸ್ವಕಾರ್ಯವೇ ಮುಖ್ಯವಾಗಿತ್ತೆಂದು ತಿಳಿದುಬಂದಿದೆ. ಮೈಸೂರು ಸರಕಾರ ರೋಡ್ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಯನ್ನು ವಿಸ್ತರಿಸುವ ಯೋಜನೆಯಲ್ಲಿ, ಕೋಲಾರ ಜಿಲ್ಲೆಯನ್ನು ಪ್ರಥಮವಾಗಿ ಆಯ್ಕೆ ಮಾಡಿಕೊಂಡಿದೆ ಇದರಿಂದಾಗಿ ಖಾಸಗಿ ಬಸ್ ಮಾಲಿಕರಿಗೆ ಆಪತ್ತು ಬಂದಿದೆ. ಕೇಂದ್ರ ಸಚಿವರುಗಳಿಗೆ ಸೇರಿದ ಕಿಸಾನ್ ಮೇಲ್ ಸರ್ವಿಸ್ ಬಸ್ಸುಗಳು ಈಗ ಕೋಲಾರದಿಂದ ಬೆಂಗಳೂರಿಗೆ ವೈಟ್‌ಫೀಲ್ಡ್ ಮಾರ್ಗವಾಗಿ ಓಡಾಡುತ್ತಿದೆ. ಈ ಗುಂಪಿಗೆ ಸೇರಿದ ಆರು—ಏಳು ಬಸ್ಸುಗಳಿವೆ. ಸರಕಾರದ ತೀರ್ಮಾನದಿಂದಾಗಿ, ಈ ಬಸ್‌ಲೈನುಗಳು ರದ್ದಾಗುವುದಿದೆ. ಖಾದರ್ ಸಾಹೇಬ್ ಎನ್ನುವವರಿಗೆ ಈ ಕಿಸಾನ್ ಮೇಲ್ ಸರ್ವಿಸ್‌ನ ಒಂದು ಲೈನ್ ಬಾಡಿಗೆಗೆ ಕೊಟ್ಟಿರುವುದರಿಂದಲೇ ತಿಂಗಳಿಗೆ 500 ರೂ. ಬಾಡಿಗೆವರಮಾನ ಬರುತ್ತಿದೆ. ಇದರಿಂದ ಹೇಗಾದರೂ ಪಾರಾಗುವುದಕ್ಕೆ ಸಚಿವರು ಸನ್ನಾಹ ಮಾಡಿದ್ದಾರೆ.

ಕೋಲಾರದಿಂದ ಬೆಂಗಳೂರಿಗೆ ಬದಲು ಕೋಲಾರದಿಂದ ಚಿತ್ತೂರಿಗೆ ಬಸ್ ಲೈನ್ ಮಾಡಿಸಿಕೊಳ್ಳಲು ಯತ್ನ ನಡೆದಿದೆ. ಸಚಿವರುಗಳು ಈಗಾಗಲೇ ರೀಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳು ಮತ್ತು ಸಂಬಂಧಪಟ್ಟ ಆಂಧ್ರದ ಮಂತ್ರಿಗಳನ್ನು ಭೆಟ್ಟಿಯಾಗಿದ್ದರೆಂದು ತಿಳಿದುಬಂದಿದೆ. ಮೇಲಿನ ಈ ಬದಲಾವಣೆಗೆ, ಸರಕಾರದ ತೀರ್ಮಾನ ಅನ್ವಯವಾಗದು. ಏಕೆಂದರೆ ಅಂತರಪ್ರಾಂತ ಸಾರಿಗೆ ವ್ಯವಸ್ಥೆಯೊಳಗೆ ಬರುವುದರಿಂದ, ಮಂತ್ರಿಗಳ ಬಸ್ ಲೈನಿಗೇನೂ ಆತಂಕವಿಲ್ಲ ಇದೀಗ ಕೇಂದ್ರ ಸಚಿವರುಗಳು ಸಾಧಿಸಿದ ಮಹತ್ಕಾರ್ಯವೆಂದು ತಿಳಿದುಬಂದಿದೆ. ಮಂತ್ರಿಗಳೇ ಹೀಗೆ ಮಾಡಿದಲ್ಲಿ ಬೇರೆಯವರೇನು ಮಾಡದಿರರು ?

ಗುಂಪು ಬಲಪಡಿಸಿಕೊಳ್ಳಲು ಯತ್ನ !

ಉಪ ಸಚಿವ ಲಿಂಗಾ ರೆಡ್ಡಿಯವರು ಕೋಲಾರ ಜಿಲ್ಲೆಯಲ್ಲಿ ತಮ್ಮ ಗುಂಪನ್ನು ಬಲಪಡಿಸಿಕೊಳ್ಳಲು ಯತ್ನಿಸುತ್ತಿದ್ದಾರೆ. ತಮ್ಮ ಪ್ರವಾಸವನ್ನು ಇದಕ್ಕಾಗಿ ವಿಶಾಸಲಾಗಿರಿಸಿದ್ದಾರೆ ಅರ್ಜಿ ಅಹವಾಲುಗಳನ್ನು ಸ್ವೀಕರಿಸಲು ಇವರಿಗೆ ಹಂಚಲಾಗಿರುವ ಜಿಲ್ಲೆಯಲ್ಲಿ ಕೋಲಾರವೂ ಒಂದಾಗಿರುವುದರಿಂದ ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಕೋಲಾರ ಜಿಲ್ಲೆಯಿಂದಲೇ ಬರುವ ಇವರಿಗೆ ಈ ಜಿಲ್ಲೆ ದೊರಕಿರುವುದು ತೂಕಡಿಸುವವನಿಗೆ ಹಾಸಿಗೆ ಹಾಸಿಕೊಟ್ಟಂತಾಗಿದೆ.

ಕೋಲಾರ ಕಾಂಗ್ರೆಸ್ ನಾಯಕರಾದ ಎನ್. ಸಿ. ನಾಗಿ ರೆಡ್ಡಿ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ. ನಾರಾಯಣ ಗೌಡ ಇವರು ಲಿಂಗಾ ರೆಡ್ಡಿಯವರನ್ನು ಸಚಿವ ಸಂಪುಟದಲ್ಲಿ ಸೇರಿಸುವುದನ್ನು ವಿರೋಧಿಸಿದ್ದರು. ವಿರೋಧಿಸುವುದಕ್ಕೆ ಇತರೆ ಕಾರಣಗಳ ಜೊತೆಗೆ ಇನ್ನೊಂದು ಕಾರಣವೆಂದರೆ, ಹಳೇ ಮೈಸೂರಿನಲ್ಲಿ ಕಾಂಗ್ರೆಸ್ಸಿಗೆ ಭಾರೀ ಸೋಲಾಗಿದ್ದು ಕೋಲಾರ ಜಿಲ್ಲೆಯಲ್ಲಿ ಎಂಬುದು, ಈ ಗುಂಪಿನ ವಿರೋಧವಾಗಿ ತಮ್ಮ ಬೆಂಬಲವನ್ನು ಹೆಚ್ಚಿಸಿಕೊಳ್ಳಲು ಲಿಂಗಾ ರೆಡ್ಡಿ ಯತ್ನಿಸುತ್ತಿದ್ದಾರೆ. ಇದಕ್ಕಾಗಿ ತಮ್ಮ ಅಧಿಕಾರವನ್ನು ಚೆನ್ನಾಗಿ ಬಳಸಿಕೊಳ್ಳುತ್ತಿದ್ದಾರೆ. ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸ್ವತಂತ್ರ ಉಮೇದುವಾರರಾಗಿ ವಿಧಾನ ಸಭೆಗೆ ಆಯ್ಕೆಯಾಗಿರುವ ಬಿ. ಎಲ್. ನಾರಾಯಣ ಸ್ವಾಮಿಯ ವಿರುದ್ಧವಾಗಿ ಲಿಂಗಾ ರೆಡ್ಡಿಯವರು ತಮ್ಮ ಪ್ರಚಾರ ಕಾರ್ಯವನ್ನು ಕೈಗೊಂಡಿದ್ದಾರೆಂದೂ, ಕಾಂಗ್ರೆಸ್ ಸಂಘಟನೆಗೆ ಜೀವತುಂಬಲು ಯತ್ನಿಸುತ್ತಿದ್ದಾರೆಂದೂ ತಿಳಿದುಬಂದಿದೆ.

ಅಷ್ಟೇ ಅಲ್ಲ ಸಚಿವರು ಬಾಗೇಪಲ್ಲಿ ತಾಲ್ಲೂಕಿಗೆ ಭೇಟಿಯಿತ್ತಾಗ, ಅಲ್ಲಿನ ಮುನಿಸಿಪಾಲಿಟಿಯ ಅಧ್ಯಕ್ಷ ಚುನಾವಣೆಯಲ್ಲಿ ತಲೆಹಾಕಿ, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಮುಸ್ಲಿಮ್ ಉಮೇದುವಾರರ ವಿರುದ್ಧ ಕೆಲಸ ಮಾಡಿದರೆಂದೂ ತಿಳಿದುಬಂದಿದೆ. ಮಂತ್ರಿಗಳು ಪ್ರವಾಸ ಕಾಲದಲ್ಲಿ ನಡೆಸುವ ಚಟುವಟಿಕೆಗಳಲ್ಲಿ ಮೇಲಿನ ಕಾರ್ಯಗಳೂ ಅಧಿಕೃತವಾದವುಗಳೇ ?

REG. No. M 6867
Edited Printed and Published by C. R. Krishna Rao, at Janashakthi Printers
L—59, K. V. Temple St., Sultanpet Bangalore—2 phone: 3810